ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 5, MAR-APR 2022, Pp 9-20

IIMRD JOURNALS
www.iimrd.com

# ಕಾರ್ಮಿಕರ ಪ್ರತಿಭಟನೆಗಳ ಚಾರಿತ್ರಿಕ ಹಿನ್ನೆಲೆ: ಒಂದು ವಿಶ್ಲೇಷಣೆ

**ಉಮೇಶ ಆರ್.ಎಸ್*** **ಮತ್ತು ಡಾ. ಶಿವಪ್ಪ. ಆರ್****

*ಪಿಹೆಚ್.ಡಿ ಸಂಶೋಧನಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಹಾಗೂ ಸಹಾಯಕ ಪ್ರಾಧ್ಯಾಪಕರು, ಬಾಪೂಜಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. **ಸಹ ಪ್ರಾಧ್ಯಾಪಕರು ಮತ್ತು ಪಿಹೆಚ್.ಡಿ ಮಾರ್ಗದರ್ಶಕರು, ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ.

**ಸಾರಾಂಶ: (Abstract)**

*ಭಾರತ ಕೃಷಿಯಾಧಾರಿತ ದೇಶವಾಗಿದ್ದು, ಕೃಷಿ ಉತ್ಪನ್ನಗಳು ಅದಕ್ಕೆ ಪೂರಕವಾಗಿ ಕೈಗಾರಿಕೆಗಳು,ಕರಕುಶಲ ಚಟುವಟಿಕೆ, ವ್ಯಾಪಾರ, ಕಟ್ಟಡಗಳ ನಿರ್ಮಾಣ ಮುಂತಾದ ಶ್ರಮ ಬಯಸುವ ಕಾರ್ಯಗಳಿಗೆ ಕಾರ್ಮಿಕರ ಉಪಸ್ಥಿತಿಯು ತುಂಬಾ ಅವಶ್ಯಕವಾಗಿದೆ. ಪುರಾತನ ಕಾಲದಿಂದಲೂ ಭಾರತದ ಇತಿಹಾಸದಲ್ಲಿ ಕೆಳಸ್ತರಕ್ಕೆ ಸೇರಿದ ಜನರು ಶ್ರಮ ಬಯಸುವ ಕೆಲಸಗಳಲ್ಲಿ ನಿರತರಾಗಿದ್ದು, ಕೃಷಿ, ಪಶುಪಾಲನೆ, ಕಾಲುವೆಗಳ ರಚನೆ, ಕಟ್ಟಡಗಳ ನಿರ್ಮಾಣ, ಕೈಗಾರಿಕಾ ಉತ್ಪಾದನೆ ಮುಂತಾದವುಗಳಲ್ಲಿ ತಮ್ಮ ಗುರುತನ್ನು ಉಳಿಸಿದ್ದಾರೆ. ಇಂತಹ ಕಾರ್ಮಿಕರು ಸಮಸ್ಯೆ, ಶೋಷಣೆ, ಪ್ರತಿರೋಧದ ಜೀವನವನ್ನು ನಡೆಸುತ್ತಾ ಬಂದಿರುವುದನ್ನು ಅನಾದಿಕಾಲದಿಂದಲೂ ಗಮನಿಸಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಪ್ರಾಚೀನ ಕಾಲದಿಂದ ಏಕೀಕರಣ ಪೂರ್ವದವರೆಗೂ ಕಾರ್ಮಿಕರ ಸಮಸ್ಯೆಗಳು, ಅವರ ಸಂಘಟನೆ ಮತ್ತು ಪ್ರತಿಭಟನೆಗಳ ಹಿನ್ನೆಲೆಯನ್ನು ಚಾರಿತ್ರಿಕ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ಕಾರ್ಮಿಕರು, ಪ್ರತಿಭಟನೆ, ಶೋಷಣೆ, ಹೋರಾಟ.

## ಪೀಠಿಕೆ

ಭಾರತದ ನಾಗರಿಕತೆ ಮತ್ತು ಸಂಸ್ಕೃತಿಯಲ್ಲಿ ಕಾರ್ಮಿಕರ ಇತಿಹಾಸವನ್ನು ಸಿಂಧೂ ಬಯಲಿನ ನಾಗರಿಕತೆಯ ಕಾಲದಿಂದಲೂ ಕಾಣಬಹುದಾಗಿದೆ. ಜನರು ಒಂದೆಡೆ ಸಾಮೂಹಿಕವಾಗಿ ಜೀವನ ನಡೆಸಲು ಮುಂದಾದ ಪರಿಣಾಮ ಕೃಷಿ, ವ್ಯಾಪಾರ, ಕೈಗಾರಿಕಾ ಚಟುವಟಿಕೆಗಳು ಅಭಿವೃದ್ಧಿಗೊಂಡು ನಗರಗಳ ನಿರ್ಮಾಣವಾದವು. ಕೃಷಿಯ ಜೊತೆಗೆ ಕೃಷಿಯೇತರ ಚಟುವಟಿಕೆಗಳಾದ ಮಡಿಕೆ ತಯಾರಿಕೆ, ಲೋಹಗಳ ವಸ್ತು ತಯಾರಿಕೆ, ಇಟ್ಟಿಗೆ ತಯಾರಿಕೆ, ಕಟ್ಟಡ ನಿರ್ಮಾಣವ, ನಗರ ಸ್ವಚ್ಛತೆ ಇತ್ಯಾದಿ ಕೆಲಸಗಳಲ್ಲಿ ನಿರತರಾದರು. ಇಂತಹ ಕೂಲಿಕಾರರು ಸಮಾಜದ ಮೇಲ್ವರ್ಗದವರಿಂದ ದೂರವಿದ್ದು ಸಾಮಾಜಿಕ ಅಂತರವನ್ನು ಹೊಂದಿದ್ದ ಬಗ್ಗೆ ಸಿಂಧೂ ನಾಗರಿಕತೆಯ ನಗರಗಳಲ್ಲಿ ಕಂಡುಬರುವ ಕೋಟೆಯ ಹೊರಗಿನ ಕೆಲಸಗಾರರ ನಿವೇಶನಗಳ ಅವಶೇಷಗಳಿಂದ ಗುರುತಿಸಲ್ಪಡುತ್ತವೆ. ಇಂತಹ ಶ್ರಮಿಕರ ಜೀವನ ಮಟ್ಟವು ದುರ್ಬಲವಾಗಿದ್ದು, ಕೂಲಿಗಾಗಿ ಧಾನ್ಯದ ರೂಪದಲ್ಲಿ ವೇತನ ಸಿಗುತ್ತಿತ್ತು. ಸೇವಕರನ್ನು ಸರಕಿನಂತೆ

*Please cite this article as: ಉಮೇಶ ಆರ್.ಎಸ್ ಮತ್ತು ಶಿವಪ್ಪ. ಆರ್* (2022). ಕಾರ್ಮಿಕರ ಪ್ರತಿಭಟನೆಗಳ ಚಾರಿತ್ರಿಕ ಹಿನ್ನೆಲೆ: ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(5). ಪು.ಸಂ.* 9–20

ಮೆಸಪಟೋಮಿಯಾಗೆ ರಫ್ತು ಮಾಡುತ್ತಿದ್ದರು. ವೇದಗಳ ಕಾಲದಲ್ಲಿ ಮಧ್ಯ ಏಷ್ಯಾದಿಂದ ಬಂದಂತಹ ಆರ್ಯರು ಸ್ಥಳೀಯರನ್ನು ಸೋಲಿಸಿ ಅವರನ್ನೆ ತಮ್ಮ ದಸ್ಯುಗಳನ್ನಾಗಿ ಪರಿವರ್ತಿಸಿಕೊಂಡು ಶೋಷಣೆಗೆ ಗುರಿಪಡಿಸುತ್ತಾ ಶೂದ್ರರಂತೆ ನಡೆಸಿಕೊಳ್ಳುತ್ತಿದ್ದರು. ವಿವಿಧ ಕೆಲಸ ಕಾರ್ಯಗಳಿಗಾಗಿ ಕೂಲಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಇಂತಹ ಕೂಲಿಗಳು ಸಾಮಾನ್ಯವಾಗಿ ವರ್ಣಪದ್ಧತಿಯಲ್ಲಿ ಗುರುತಿಸಲ್ಪಡುತ್ತಿದ್ದ ಶೂದ್ರರಾಗಿದ್ದರು. ಮಗದ, ತಕ್ಷಶಿಲೆ ಮುಂತಾದ ಕಡೆ ಕೂಲಿಯನ್ನು ಬೆಳ್ಳಿ, ತಾಮ್ರದ ನಾಣ್ಯಗಳಲ್ಲಿ, ಧಾನ್ಯದ ರೂಪದಲ್ಲಿ ನೀಡುತ್ತಿದ್ದರೆಂದು ಪಾಲಿಗ್ರಂಥಗಳು ಸೂಚಿಸುತ್ತವೆ.

ಮೌರ್ಯರ ಕಾಲದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಿರುವಂತೆ ಶೂದ್ರರು ಕೃಷಿಕರಾಗಿದ್ದು [ಕರ್ಷಕ] ಬೆಳೆ ಬೆಳೆದು ತೆರಿಗೆಯನ್ನು ಕಟ್ಟಬೇಕಿತ್ತು. ಅವರಿಗೆ ನೀಡಲಾದ ಭೂಮಿಯಲ್ಲಿ ಕೃಷಿ ಮಾಡದಿದ್ದರೆ ಭೂಮಿಯನ್ನು ಹಿಂಪಡೆಯಲಾಗುತ್ತಿತ್ತು. ರಾಜನಿಗೆ ಸೇರಿದ ಕೃಷಿ ಭೂಮಿಯಲ್ಲಿ ಗುಲಾಮರು, ಕಾರ್ಮಿಕರು ಕೃಷಿ ಮಾಡಬೇಕಿದ್ದು, ತಮ್ಮ ಮೇಲೆ ವಿಧಿಸಲಾಗಿದ್ದ ದಂಡವನ್ನು ಕಟ್ಟಲು ಸಾಧ್ಯವಿಲ್ಲದವರು ಕೂಲಿಯಾಳಾಗಿ ಹೊಲಗಳಲ್ಲಿ ದುಡಿಯಬೇಕಿತ್ತು. ಮೌರ್ಯರು ಸೀತಾಧ್ಯಕ್ಷ ಎಂಬ ಕೃಷಿ ಅಧಿಕಾರಿಯನ್ನು ನೇಮಿಸಿದ್ದು, ಕೃಷಿ ಕಾರ್ಮಿಕರ ಮೇಲ್ವಿಚಾರಣೆ, ಕೃಷಿ ಚಟುವಟಿಕೆಗೆ ಬೇಕಾದ ವಸ್ತು ಅಥವಾ ಹಣದ ರೂಪದಲ್ಲಿ ಸಾಲ ನೀಡುತ್ತಿದ್ದರು. ಕೂಲಿಕಾರರಿಗೆ ಅವರ ಕುಟುಂಬದ ಸದಸ್ಯರಿಗೆ ಅನುಗುಣವಾಗಿ ಕೂಲಿಯನ್ನು ನೀಡುತ್ತಿದ್ದುದ್ದು ಇಲ್ಲಿ ವಿಶೇಷವಾಗಿ ಗುರುತಿಸಬಹುದಾಗಿದೆ. ಮೌರ್ಯರ ಕಾಲದಲ್ಲಿ ಗಣಿಗಾರಿಕೆಯು ಪ್ರಮುಖ ಉದ್ಯಮವಾಗಿತ್ತು. ದಕ್ಷಿಣ ಗುಜರಾತ್‌ನ ರಾಜಪಿಪ್ಪಲದಲ್ಲಿ ಕಲ್ಲುಗಣಿ, ದಕ್ಷಿಣ ಭಾರತದ ಸುವರ್ಣಗಿರಿ, ಕರ್ನಾಟಕದ ಮಸ್ಕಿ, ಅರಾವಳಿ ಬೆಟ್ಟಗಳಲ್ಲಿ ಬರುವ ಜವಾರ್, ಆಗುಚಾ, ದರಿಭಾಗಳಲ್ಲಿ ಚಿನ್ನದ ಗಣಿಗಳಿದ್ದು, ಅಲ್ಲಿ ಕೆಳವರ್ಗದ ಚಂಡಾಲರು, ಶ್ವಪಾಕರು, ಅರಣ್ಯವಾಸಿಗಳು ಮುಂತಾದ ಅವರ್ಣಿಯರು ಕಾರ್ಮಿಕರಾಗಿದ್ದರು, ಅಲ್ಲದೇ ಶೂದ್ರ ಕಾರ್ಮಿಕರ ಸಹಾಯದಿಂದ ಹೊಸ ಜನವಸತಿ ಪ್ರದೇಶಗಳನ್ನು ಮೌರ್ಯರು ನೆಲೆಗೊಳಿಸುತ್ತಿದ್ದರು. ಇಂತಹ ಕಾರ್ಮಿಕರು ಸಮಾಜದಲ್ಲಿನ ಅಸಮಾನತೆಯ ಸುಳಿಗೆ ಸಿಲುಕಿ ದುರ್ಬಲ ಜೀವನ ನಡೆಸುತ್ತಿದ್ದರು ಎಂಬುದನ್ನು ಮೆಗಾಸ್ತನೀಸನ ಇಂಡಿಕಾ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ.

ಮೌರ್ಯೋತ್ತರ ಕಾಲದಲ್ಲಿ ಕುಶಾನರು, ಶಾತವಾಹನರು, ಗುಪ್ತರ ಅವಧಿಯಲ್ಲಿ ಕೂಲಿ ಕಾರ್ಮಿಕರು ಗುಲಾಮರಾಗಿ, ಜೀತದಾಳುಗಳಾಗಿ ಹೊಲ, ಮನೆಗಳಲ್ಲಿ ಶ್ರೀಮಂತರು, ವ್ಯಾಪಾರಿಗಳು, ರಾಜಪರಿವಾರದವರ ಬಳಿ ಸೇವೆಯನ್ನು ಸಲ್ಲಿಸುತ್ತಿದ್ದರು. ಗುಪ್ತರ ಕಾಲದಲ್ಲಿ ಪುರೋಹಿತರೂ ಭೂ ಮಾಲೀಕರಾಗಿದ್ದು, ಕೃಷಿ ಕ್ಷೇತ್ರ ವಿಸ್ತಾರವಾಯಿತು. ಆಗ ಶೂದ್ರರು, ಅರಣ್ಯವಾಸಿ ಕೃಷಿಕರು ಮತ್ತಷ್ಟು ಕೆಳಗಿನ ಸ್ಥಾನಕ್ಕೆ ಇಳಿದು ಬಿಟ್ಟಿ ದುಡಿಮೆಗೆ ಗುರಿಯಾದರು. ಮೂರು ವರ್ಣದವರ ದಾಸರಾಗಿ ಕೃಷಿ ಕಾರ್ಮಿಕರಾದರು, ಶೂದ್ರ ಹೆಂಗಸರು ಕೃಷಿ, ಗೃಹಕೃತ್ಯಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದರು. ಚೀನಿ ಯಾತ್ರಿಕನಾದ ಫಾಹಿಯಾನನು ಕ್ರಿ.ಶ. 5ನೇ ಶತಮಾನದಲ್ಲಿ ಅಸ್ಪೃಶ್ಯರಾದ ಚಂಡಾಲರು ಶ್ರಮದಾಯಕ ಕೆಲಸದಲ್ಲಿ ನಿರತರಾಗಿದ್ದು ಊರಿನಿಂದ ಹೊರಗಿದ್ದರೆಂದು ತಿಳಿಸುತ್ತಾನೆ.

ದಕ್ಷಿಣ ಭಾರತದಲ್ಲಿ ಸಂಘಂ ರಾಜ್ಯಗಳಾದ ಚೋಳ, ಚೇರ, ಪಾಂಡ್ಯರ ಪ್ರದೇಶಗಳಲ್ಲಿ 'ವೆಳ್ಳಾಲರು' ಶ್ರೀಮಂತ ಕೃಷಿಕರಾಗಿದ್ದು ಅವರ ಭೂಮಿಯನ್ನು ಉಳುಮೆ ಮಾಡಲು 'ಕಡೈಸಿಯರ್', 'ಪರೈಯರ್' ಎಂಬ

ಕಾರ್ಮಿಕರು ಆಳುಗಳಾಗಿದ್ದರು. ಇವರು ಕೆಳಜಾತಿಗೆ ಸೇರಿದ ಚರ್ಮದ ಕೆಲಸಗಾರರಾಗಿದ್ದ ಅರಣ್ಯವಾಸಿಗಳು, ಇವರು ಸಾಮಾಜಿಕ ಅಸಮಾನತೆಗಳಿಂದ ಬದುಕು ಸಾಗಿಸುತ್ತಿದ್ದರು. ಅದಕ್ಕೆ ಪೂರಕವಾಗಿ ವೃತ್ತಿಗನುಗುಣವಾಗಿ ಜನರು ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಉದಾ: ತೆಲಂಗಾಣದ ಕರೀಂನಗರ ಜಿಲ್ಲೆಯ ಒಂದು ಗ್ರಾಮದಲ್ಲಿ ಬಡಗಿಗಳು, ಅಕ್ಕಸಾಲಿಗರು, ಕಮ್ಮಾರರು, ಕೃಷಿ ಕಾರ್ಮಿಕರು, ಹಾಗೂ ಇತರೆ ಕಾರ್ಮಿಕರು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂಬುದನ್ನು ನಿವೇಶನಗಳ ಉತ್ಖನನಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ.

ಗುಪ್ತೋತ್ತರ ಕಾಲದಲ್ಲಿ ಶೂದ್ರರು ಕೃಷಿಕರಾಗಿದ್ದು, ಅವರಲ್ಲಿಯೇ ಕೆಳವರ್ಗಕ್ಕೆ ಸೇರಿದ್ದ ವಧಕಾರ ಊರು ಶುದ್ಧ ಮಾಡುವವರು, ಅಸ್ಪೃಶ್ಯರಾಗಿದ್ದು ಪೌರಕಾರ್ಮಿಕರಾಗಿದ್ದರೆಂಬುದನ್ನು ಮತ್ತು ಅವರು ಸಮಾಜದ ಮೇಲ್ವರ್ಗದವರಿಂದ ದೂರವಿದ್ದರೆಂದು ಹರ್ಷನ ಆಸ್ಥಾನಕ್ಕೆ ಬಂದಿದ್ದ ಹ್ಯೂಯೆನ್‌ತ್ಸಾಂಗ್‌ನು ತಿಳಿಸುತ್ತಾನೆ. ಕ್ರಿ.ಶ. 3ನೇ ಶತಮಾನದಿಂದ 7ನೇ ಶತಮಾನದ ಅವಧಿಯಲ್ಲಿ ದಕ್ಷಿಣದ ವಾಕಾಟಕರು (ಮಹಾರಾಷ್ಟ್ರ–ವಿದರ್ಭಭಾಗ), ಇಕ್ಷ್ವಾಕರು (ಆಂಧ್ರ), ಬಾದಾಮಿ ಚಾಲುಕ್ಯರು, ಪಲ್ಲವರು, ಮಧುರೈ ಪಾಂಡ್ಯರು ಮುಂತಾದ ರಾಜಮನೆತನಗಳು ಆಳಿದರು. ಕದಂಬರು, ಗಂಗರ ಕಾಲಾವಧಿಯಲ್ಲಿ ಬ್ರಾಹ್ಮಣರಿಗೆ ಭೂಮಿಯ ಹಕ್ಕನ್ನು ನೀಡಿದ್ದರು ಎಂಬುದ ತಿಳಿಯುತ್ತದೆ. ಅಂತಹ ಬ್ರಾಹ್ಮಣರು ಗ್ರಾಮದ ಜನರಿಂದ ಭೂಕಂದಾಯವನ್ನು ಪಡೆಯುತ್ತಿದ್ದರು ಹಾಗೂ ಕಡ್ಡಾಯ ಸೇವೆಗಳನ್ನು ಪಡೆಯುತ್ತಿದ್ದರು, ಬ್ರಾಹ್ಮಣರು ಕೃಷಿ ಕಾರ್ಮಿಕರಾದ ವಾರಗಾರರನ್ನು ಬಳಸಿಕೊಂಡು ಕೃಷಿ ಚಟುವಟಿಕೆ ಮಾಡುತ್ತಿದ್ದರು ಹಾಗೂ ವೈಶ್ಯರನ್ನು ಸಹಾ ಇವರು ಶೂದ್ರರೆಂದು ಪರಿಗಣಿಸಿದ್ದರು. ಮೇಲ್ವರ್ಗದವರು ಕೆಳವರ್ಗದವರನ್ನು ಸಮಾನವಾಗಿ ಕಾಣದೇ ಕೇವಲ ಸೇವೆಗಾಗಿ ಪರಿಗಣಿಸುತ್ತಿದ್ದರು. ಇದರಿಂದಾಗಿ ಅಸಂತೃಪ್ತರಾಗಿದ್ದ ಕೆಳವರ್ಗದ ವೈಶ್ಯರು, ಶೂದ್ರರು ಜಾತಿ/ವರ್ಣಭೇದವನ್ನು ವಿರೋಧಿಸಿ ಮೇಲ್ವರ್ಗದವರ ಸೇವೆಯನ್ನು ಸಲ್ಲಿಸಲು ನಿರಾಕರಿಸಿದರು ಮತ್ತು ತಮ್ಮ ಸೇವೆಯಿಂದ ವಿಮುಖರಾಗಲು ಪ್ರಯತ್ನಿಸಿದಾಗ ಅದನ್ನು ಮೇಲ್ವರ್ಗದವರು ಪ್ರಭುತ್ವದ ಸಹಾಯದಿಂದ ದಮನ ಮಾಡಿದರು ಎಂದು ತಾಮ್ರ ಶಾಸನಗಳಿಂದ ತಿಳಿಯುತ್ತದೆ.

ಕ್ರಿ.ಶ. 7ನೇ ಶತಮಾನದ ನಂತರದಲ್ಲಿ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರ ಕಾಲಾವಧಿಯಲ್ಲಿ ಕಾರ್ಮಿಕರ ಸ್ಥಿತಿಗತಿಗಳನ್ನು ಗುರುತಿಸುವುದಾದರೆ, ಭೂ ಆಧಾರಿತ ಆರ್ಥಿಕತೆಯಿದ್ದು ಊಳಿಗಮಾನ್ಯ, ಭೂಮಾಲೀಕತ್ವ, ಮಧ್ಯವರ್ತಿ, ದಾನ ಇತ್ಯಾದಿಗಳು ಅಂದಿನ ಸಮಾಜದಲ್ಲಿ ಭಾಗವಾಗಿದ್ದವು. ಅದಕ್ಕೆ ಪೂರಕವಾಗಿ ಶ್ರಮ ಬೇಡುವ ಕೆಲಸಗಳು ಅಸ್ತಿತ್ವದಲ್ಲಿದ್ದು, ಅದರಲ್ಲಿ ಕಾರ್ಮಿಕರ ಪಾತ್ರ ಗುರುತಿಸಬಹುದಾಗಿದೆ. ಈ ಅವಧಿಯಲ್ಲಿ ಸಮಾಜದ ವಿವಿಧ ಸ್ತರಗಳು ಬೇಟೆ, ಪಶುಸಂಗೋಪನೆ, ಕೃಷಿ, ಉದ್ದಿಮೆ ಇತ್ಯಾದಿಗಳ ಮೂಲಕ ಸಾಮಾಜಿಕ ವಿಕಾಸದ ಪ್ರಕ್ರಿಯೆಗಳು ಕಾಣಿಸಿಕೊಂಡವು. ಕೃಷಿ ರಾಜ್ಯಾದಾಯದ ಪ್ರಧಾನ ಭಾಗವಾಗಿದ್ದು, ಕೃಷಿ ಕಾರ್ಮಿಕರು ಭೂಮಾಲೀಕರ ಜೀತದಾಳುಗಳಾಗಿ ಗುಲಾಮರಾಗಿ ಬಲವಂತದ ದುಡಿಮೆಗೆ ಒಳಪಟ್ಟಿದ್ದು ಶೋಷಣೆಗೆ ಗುರಿಯಾಗಿ ಸಮಾಜದ ಅಲಕ್ಷಿತ ವರ್ಗಕ್ಕೆ ಸೇರಿದ್ದರು. ರೈತರು ಸಹಾ ಕೂಲಿಯಾಳುಗಳಾಗಿ ಕೆಲಸ ಮಾಡುತ್ತಿದ್ದು, ಕೃಷಿ ಉಪಕರಣಗಳಂತೆ ಬಳಸಲ್ಪಡುತ್ತಿದ್ದರು. ಕೆರೆ, ಕಾಲುವೆ, ದೇವಾಲಯ, ಕಟ್ಟಡ, ಕೋಟೆಗಳು ಇತ್ಯಾದಿಗಳ ನಿರ್ಮಾಣ, ದುರಸ್ಥಿ ಕಾರ್ಯಗಳು ನಿರಂತರವಾಗಿ ನಡೆಯುತ್ತಿದ್ದವು. ಉದಾ:– ಶಾಸನಗಳಲ್ಲಿ ಉಲ್ಲೇಖಿಸಿರುವ ಪ್ರಧಾನ ವೀರ

ದಂಡನಾಯಕನ ಕೆರೆಗಳು, ಆದಿತ್ಯಭಟ್ಟ – ತುಂಗಾ ಭದ್ರ ನದಿಗೆ ಕಾಲುವೆ ಕಟ್ಟಿಸಿದ್ದು, ಇಂತಹ ನಿರ್ಮಾಣ ಕಾರ್ಯಗಳಲ್ಲಿ ಕಾರ್ಮಿಕರ ಶ್ರಮವು ಗುರುತಿಸಲ್ಪಡುತ್ತದೆ. ಕಾರ್ಮಿಕರನ್ನು ಬಳಸಿಕೊಳ್ಳುತ್ತಿದ್ದ ಭೂ ಮಾಲೀಕರು, ಪ್ರಭುತ್ವ ಅಧಿಕಾರಿಗಳು ಅವರ ಶ್ರಮಕ್ಕೆ ತಕ್ಕ ಕೂಲಿಯನ್ನು ನೀಡುತ್ತಿರಲಿಲ್ಲ. ಕಂದಾಯ ಅಧಿಕಾರಿಗಳು ಕಾರ್ಮಿಕರ ಮೇಲೆ 'ಬಿಟ್ಟಿಬೆಸ' ಎಂಬ ತೆರಿಗೆಯನ್ನು ವಿಧಿಸಿ ಬಿಟ್ಟಿ ಕೆಲಸ ಮಾಡಿಸುತ್ತಿದ್ದರು. ಭೂ ಮಾಲೀಕರು ಕೃಷಿ ಕಾರ್ಮಿಕರು / ರೈತರಿಂದ ಬಿಟ್ಟಿ ದುಡಿಮೆಯನ್ನು ಪಡೆಯುತ್ತಿದ್ದರು. ಇಂತಹ ಕೃಷಿ ಕಾರ್ಮಿಕರನ್ನು ಹೊಲೆಯ ಮತ್ತು ತೊಟ್ಟು ಎಂಬುದಾಗಿ ಕರೆಯುತ್ತಿದ್ದು ಜೀತದಾಳುಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಹೀಗೆ ಕೃಷಿ ಕಾರ್ಮಿಕರನ್ನು ಭೂಮಾಲೀಕರು, ಅಧಿಕಾರಿಗಳು ಶೋಷಣೆ ಮಾಡುತ್ತಿದ್ದು ಅವರನ್ನು ದುಃಸ್ಥಿತಿಗೆ ತಳ್ಳಿದ್ದು ಸಾಮಾಜಿಕ, ಆರ್ಥಿಕವಾಗಿ ಅಭದ್ರತೆ ಅವರನ್ನು ಕಾಡುತ್ತಿತ್ತು. ಇಂತಹ ದಬ್ಬಾಳಿಕೆಯನ್ನು ಸಹಿಸಿಕೊಳ್ಳುತ್ತಿದ್ದ ಕಾರ್ಮಿಕರು ಅದರ ವಿರುದ್ಧ ಪ್ರತಿಭಟನೆಗಳಿಗಿಂತ ಮನಸ್ತಾಪಗಳನ್ನು ವ್ಯಕ್ತಪಡಿಸುತ್ತಿದ್ದರು. ಕೃಷಿಯೇತರವಾಗಿ ಉದ್ದಿಮೆಗಳು, ಗಣಿಗಳು ಅಸ್ತಿತ್ವದಲ್ಲಿದ್ದವು. (ಗುಬ್ಬಿ, ಚಿಕ್ಕನಾಯಕನಹಳ್ಳಿ, ಬಳ್ಳಾರಿ, ಮಾಗಡಿ – ಕಬ್ಬಿಣ, ಚಿನ್ನ, ತಾಮ್ರದ ಗಣಿಗಳು) ಉದ್ದಿಮೆಗಳಲ್ಲಿ ನೇಕಾರಿಕೆ, ಮಡಿಕೆ ತಯಾರಿಕೆ ಗಾಣ, ಮರದ ಕೆಲಸ, ಲೋಹದ ವಸ್ತುಗಳು, ಯುದ್ಧೋಪಕರಣ ತಯಾರಿಕೆಗಳು, ಗಣಿಗಳಲ್ಲಿ ಕೆಳವರ್ಗದ ಶೂದ್ರರು ಕಡಿಮೆ ಕೂಲಿಗೆ ಬಲವಂತವಾಗಿ ದುಡಿಯುತ್ತಿದ್ದರು. ಉದಾಃ ಅಗಸರು, ನಾವಿದರು (ಕ್ಷೌರಿಕರು), ನೇಕಾರರು, ಬಳೆಗಾರರು, ಬೆಸ್ತರು, ತೈಲಿಗರು, ಚಿಪ್ಪಿಗರು (ಬಟ್ಟೆ ಕತ್ತರಿಸುವವರು ಮತ್ತು ಹೊಲೆಯುವವರು), ತಂಬುಲಿಗರು (ವೀಳ್ಯೆದೆಲೆ ಮಾರಾಟಗಾರರು), ತಮ್ಮ ಮಾಲೀಕರ ಅಧೀನದಲ್ಲಿ ಒತ್ತಾಯ ಪೂರ್ವಕವಾಗಿ, ಶೋಷಣೆಯನ್ನು ವಿರೋಧಿಸದೇ ಸೇವೆಯನ್ನು ನಿರ್ವಹಿಸಬೇಕಾಗುತ್ತಿತ್ತು. ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದ ರೈತರು, ಕಾರ್ಮಿಕರನ್ನು ಭೂ ಮಾಲೀಕರಾದ ಮಹಾಜನರು, ಪೆರ್ಗಡೆಗಳು, ಗಾವುಂಡರು ಮುಂತಾದವರು ಮಧ್ಯವರ್ತಿಗಳಾಗಿದ್ದು, ಕೃಷಿಕರು, ಕಾರ್ಮಿಕರನ್ನು ಶೋಷಣೆ ಮಾಡಲು ಅರಸೊತ್ತಿಗೆಯಿಂದ ಪರೋಕ್ಷವಾಗಿಯೇ ಹಕ್ಕನ್ನು ಪಡೆದಿದ್ದವರಂತೆ ವರ್ತಿಸುತ್ತಿದ್ದರು. ಶ್ರಮಿಕರ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ನೀಡದೇ ಶೋಷಿಸುತ್ತಿದ್ದರು. ಇಂತಹ ಶ್ರಮಿಕ / ಕಾರ್ಮಿಕರ ಬಗ್ಗೆ ಎಲ್ಲೂ ಗುರುತಿಸದೇ ಕಟ್ಟಿಸಿದವರ ಬಗ್ಗೆ ಮಾತ್ರ ಶಾಸನಗಳಲ್ಲಿ, ಸಾಹಿತ್ಯಗಳಲ್ಲಿ ಉಲ್ಲೇಖಿಸಿ ಅಂದಿನ ರಾಜಪ್ರಭುತ್ವ, ಧರ್ಮ ಪ್ರಭುತ್ವಗಳ ಸಂಕೇತ ಎಂದು ಪರಿಗಣಿಸಲ್ಪಡುವ ಬೃಹತ್ ಕಟ್ಟಡಗಳ ರಚನೆಯಲ್ಲಿ ಪ್ರಧಾನ ಪಾತ್ರ ವಹಿಸಿದ ಶ್ರಮಿಕರನ್ನು ಕಡೆಗಣಿಸಿರುವುದು ತಿಳಿದುಬರುತ್ತದೆ.

ಮಧ್ಯಕಾಲೀನ ಸಮಾಜದಲ್ಲಿ ದಕ್ಷಿಣ ಭಾರತದ ವಿಜಯನಗರ ಸಾಮ್ರಾಜ್ಯ ಹಾಗೂ ಇತರೇ ರಾಜ್ಯ, ಸಂಸ್ಥಾನಗಳಲ್ಲಿಯೂ ಅವರ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿ ಕಾಣಲಾರದು. ಸಮಾಜದಲ್ಲಿ ಕೆಳವರ್ಗಕ್ಕೆ ಸೇರಿದ ಶೂದ್ರರು, ಅಸ್ಪೃಶ್ಯರು, ನಿಷಾದರು ಮತ್ತು ದಸ್ಯುಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಬಳಿ ಅತ್ಯಂತ ಕಷ್ಟ ಮತ್ತು ಅಸಹ್ಯ ತರುವಂತಹ ಕೆಲಸಗಳನ್ನು ಮಾಡುತ್ತಿದ್ದರು. ಕನಕದಾಸರ ರಾಮಧಾನ್ಯ ಚರಿತೆಯಲ್ಲಿ ಮನುಷ್ಯರ ಮಾರಾಟ, ಜೀತದಾಳು/ ಗುಲಾಮಗಿರಿ ಪದ್ಧತಿ ಇದ್ದ ಬಗ್ಗೆ ಉಲ್ಲೇಖಿಸಲಾಗಿದೆ. ವಿಜಯನಗರ ಕಾಲದಲ್ಲಿ ಕಾರ್ಮಿಕರನ್ನು ಬಲತ್ಕಾರದಿಂದ ದೇವರ ಸೇವೆ ಅಥವಾ ದಾನವೆಂದು [ಬಿಟ್ಟಿ ಮತ್ತು ಕಡ್ಡಾಯ] ಪರಿಗಣಿಸಿ ಕೆರೆ, ಕಾಲುವೆ, ಬಾವಿಗಳನ್ನು ನಿರ್ಮಿಸಲು ಬಳಸುತ್ತಿದ್ದರು. ವಿಜಯನಗರೋತ್ತರ ಕಾಲದಲ್ಲಿ ಕಾರ್ಮಿಕರ ಪರಿಸ್ಥಿತಿಗಳನ್ನು ಗಮನಿಸುವುದಾದರೇ ಜಾತಿ ವ್ಯವಸ್ಥೆಯು ಕಠಿಣವಾಗಿದ್ದು, ಶೂದ್ರರು ಕೃಷಿ

ಹಾಗೂ ಇನ್ನಿತರೆ ಸೇವೆಗಳನ್ನು ಮಾಡುತ್ತಿದ್ದರು. ಇಂತಹ ಕಾರ್ಮಿಕರನ್ನು ವೃತ್ತಿಯಾಧಾರಿತವಾಗಿ ಜಾತಿಗಳನ್ನಾಗಿ ವಿಂಗಡಿಸಿದ್ದರು. ಬಡಗಿ, ಕಮ್ಮಾರ, ಶಿಲ್ಪಿ, ಅಗಸ, ಕ್ಷೌರಿಕ, ದೇವಾ (ನೇಯ್ಗೆ), ಚಿಪ್ಪಿಗ (ಬಟ್ಟೆ ಹೊಲೆಯುವವ), ತೆಲ್ಲಿಗ (ಗಾಣಿಗ), ಕುಂಬಾರ, ಮೋಜಿ (ಪಾದರಕ್ಷೆ ಮಾಡುವವ), ಮೇದಾ (ಬುಟ್ಟಿ ನೇಯುವವನು), ಗೊಲ್ಲ (ದನ ಕಾಯುವವ), ತಂಬುಳಿಗ (ವೀಳ್ಯೆದೆಲೆ ಮಾರಾಟ), ಡೊಂಬ (ದೊಂಬರಾಟ ಆಡುವವನು), ಉಪ್ಪಾರ, ಹೊಲೆಯ (ಕೊಳಕು ತೆಗೆಯುವ, ಸತ್ತ ಜಾನುವಾರು ತೆಗೆಯುವವರು), ಮಾದಿಗ, ಚಂಡಾಲ, ಬೇಡರು ಇಂತಹ ಕೆಳಜಾತಿಗೆ ಸೇರಿದ ಕಾರ್ಮಿಕರು ಮೇಲ್ವರ್ಗದವರ ಇಚ್ಛೆಗೆ ಅನುಗುಣವಾಗಿ ಅವರ ಬಳಿ ಕೆಲಸ ಮಾಡಬೇಕಿತ್ತು. ಅವರು ಕೊಡುವ ಹಣ ಅಥವಾ ಧಾನ್ಯರೂಪದ ಅಲ್ಪ ಪ್ರಮಾಣದ ಕೂಲಿಯನ್ನು ಪಡೆದುಕೊಳ್ಳಬೇಕಿತ್ತು. ಕೆಲವೊಮ್ಮೆ ದೇವರ ಹೆಸರಿನಲ್ಲಿ ಬಿಟ್ಟಿ ಸೇವೆಯನ್ನು ತಪ್ಪದೇ ಮಾಡಬೇಕಿತ್ತು.

**ವಸಾಹತುಶಾಹಿ ಕಾಲದಲ್ಲಿ ಕಾರ್ಮಿಕರ ಪ್ರತಿಭಟನೆಗಳು**

ಭಾರತಕ್ಕೆ ಬಂದ ಯೂರೋಪಿಯನ್ನರು 18ನೇ ಶತಮಾನದ ಮಧ್ಯಭಾಗದಲ್ಲಿ ವಸಾಹತು ಸ್ಥಾಪಿಸಿದರು. ಅವರಲ್ಲಿ ಬ್ರಿಟಿಷರು ಭಾರತದಲ್ಲಿ ಸಿಗುವ ಕಚ್ಚಾ ಸರಕುಗಳನ್ನು ಕೊಂಡೊಯ್ದು ಅದರಿಂದ ಹೆಚ್ಚು ಲಾಭಗಳಿಸುತ್ತಿದ್ದರು. ಇಂಗ್ಲೆಂಡಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಅಲ್ಲಿನ ಕಾರ್ಖಾನೆಗಳು ಅಭಿವೃದ್ಧಿಯಾಗಿ ಉತ್ಪಾದನಾ ಸಾಮರ್ಥ್ಯ ಹೆಚ್ಚಾಯಿತು. ಭಾರತದ ಕೃಷಿಯಾಧಾರಿತ ಕಚ್ಚಾ ಸರಕುಗಳು ಇಂಗ್ಲೆಂಡಿನ ಸರ್ಕಾರಕ್ಕೆ ಹೆಚ್ಚು ಆದಾಯವನ್ನು ಗಳಿಸಿಕೊಡುತ್ತಿದ್ದವು. ಇದರ ಪರಿಣಾಮವಾಗಿ ಭಾರತದಲ್ಲಿ ಉತ್ಪಾದಿಸಲಾಗುತ್ತಿದ್ದ ಕಚ್ಚಾ ಸರಕುಗಳಾದ ಹತ್ತಿ, ನೀಲಿ, ಸೆಣಬು, ಚಹ, ಅಫೀಮು ಮುಂತಾದವುಗಳಿಗೆ ಬೇಡಿಕೆ ಹೆಚ್ಚಾಯಿತು. ಇದರ ಪರಿಣಾಮವಾಗಿ ಭಾರತದಲ್ಲಿ ಚಹ, ನೀಲಿ, ಸೆಣಬಿನ ತೋಟಗಳು ಯೂರೋಪಿಯನ್ನರ ಮೇಲ್ವಿಚಾರಣೆಯಲ್ಲಿ ವೃದ್ಧಿಯಾದವು. ಕಲ್ಕತ್ತಾ, ಬಾಂಬೆ, ಅಹಮದಾಬಾದ್, ಕಾನ್ಪುರ, ಮದ್ರಾಸ್ ಮುಂತಾದ ಕಡೆ ವಿವಿಧ ಕೈಗಾರಿಕೆಗಳೂ ಗಣಿಗಳು ಸ್ಥಾಪಿತವಾದವು. ಇದರ ಪರಿಣಾಮವಾಗಿ ಕಾರ್ಮಿಕರ ವರ್ಗ ರೂಪುಗೊಂಡಿತು. ಸ್ತ್ರೀ–ಪುರುಷರಿಬ್ಬರು ಈ ವರ್ಗದ ಭಾಗವಾಗಿದ್ದು, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ಕಡಿಮೆ ವೇತನಕ್ಕಾಗಿ ಹೆಚ್ಚು ಶ್ರಮವಹಿಸಿ ಮಾಲೀಕರಿಂದ ದೈಹಿಕ, ಮಾನಸಿಕ ಹಿಂಸೆ, ಶೋಷಣೆಗಳಿಗೆ ಒಳಪಟ್ಟು ಕೆಲಸ ಮಾಡುತ್ತಿದ್ದರು. ಕ್ರಿ.ಶ. 1901ರ ವೇಳೆಗೆ ಕೃಷಿ ಕಾರ್ಮಿಕರು ಶೇ.27 ರಿಂದ 29 ರಷ್ಟಿದ್ದರು. ಗ್ರಾಮೀಣ ಭಾಗದ ಕಾರ್ಮಿಕರು ಕಡಿಮೆ ವೇತನವನ್ನು ಪಡೆಯುತ್ತಿದ್ದು, ಕೆಟ್ಟ ಅಪೌಷ್ಠಿಕತೆಯಿಂದ ಕೂಡಿದ ಆಹಾರ ಸೇವಿಸುತ್ತಿದ್ದರು. ಕೃಷಿಯನ್ನು ಹೊರತು ಪಡಿಸಿ ರೈಲ್ವೆ ನಿರ್ಮಾಣ, ಕಾಲುವೆ ತೋಡುವಿಕೆ, ಸೇತುವೆ, ರಸ್ತೆ ನಿರ್ಮಾಣ, ಕಟ್ಟಡಗಳ ನಿರ್ಮಾಣದಲ್ಲಿ ಕಾರ್ಮಿಕರು ಕಡಿಮೆ ಕೂಲಿಗೆ ಕೆಲಸ ಮಾಡುತ್ತಿದ್ದರು. ಇವುಗಳು ತಾತ್ಕಾಲಿಕ ಉದ್ಯೋಗಗಳಾಗಿದ್ದವು. ಕೃಷಿ ಕಾರ್ಮಿಕರು ತಮಗೆ ಸಿಗುವ ಕೂಲಿ ಸಾಲದೆ ಸಾಲ ಪಡೆದು ಸಾಲಿಗರ ಬಳಿ ಕಡಿಮೆ ಸಂಬಳಕ್ಕೆ ದುಡಿಯುವ ಅಥವಾ ಜೀತದಾಳುಗಳಂತೆ ಅಧೀನವಾಗಿ ಬದುಕುವ ಪರಿಸ್ಥಿತಿಗೆ ಬರುತ್ತಿದ್ದರು. ಜಮೀನ್ದಾರರು ಕೆಲವು ಜನರಿಂದ ಬೇಗಾರ್ ಎಂಬ ಬಲವಂತದ, ಕೂಲಿಯಿಲ್ಲದ ಸೇವೆಯನ್ನು ಪಡೆಯುತ್ತಿದ್ದರು. ಇಂತಹ ಪದ್ಧತಿಗಳು ಕೆಳಜಾತಿಯ ಅಥವಾ ಅಸ್ಪೃಶ್ಯ ಕಾರ್ಮಿಕರನ್ನು ಅಧೀನದಲ್ಲಿಡುವ ಪ್ರಯತ್ನವಾಗಿತ್ತು ಮತ್ತು ಅವರು ಮೇಲು ಜಾತಿಯ ಕಾರ್ಮಿಕರಿಗಿಂತ ಕಡಿಮೆ

ಕೂಲಿಯನ್ನು ಒಪ್ಪಿಕೊಳ್ಳಬೇಕಾಯಿತು. 1890 ರವರೆಗೆ ಹೆಚ್ಚು ಜನರು ಇದರಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಅಸ್ಸಾಂ, ಮಣಿಪುರ, ಕೇರಳಗಳಲ್ಲಿ ಟೀ ತೋಟಗಳು ದಕ್ಷಿಣದ ಮೈಸೂರು, ಕೊಡಗು, ಹಾಸನ, ದಕ್ಷಿಣಕನ್ನಡ, ಕೊಚ್ಚಿನ್ ಸುತ್ತಮುತ್ತ ಕಾಫಿ ತೋಟಗಳು, ಭಾರತದ ವಿವಿಧ ಪ್ರದೇಶಗಳಲ್ಲಿ (ಮಧ್ಯಪ್ರದೇಶ, ಕೊಚ್ಚಿನ್, ಬರ್ಮಾ) ರಬ್ಬರ್ ತೋಟಗಳನ್ನು ನಿರ್ಮಿಸಿದರು. ಕಾರ್ಮಿಕರು ತಮ್ಮ ಕರಾರು ಮುರಿದು ತೋಟಗಳಿಂದ ತಪ್ಪಿಸಿಕೊಂಡರೆ 1859ರ 'ವರ್ಕ್ ಮೆನ್ಸ್ ಬ್ರೀಚ್ ಆಫ್ ಕಾಂಟ್ರಾಕ್ಟ್' ಕಾಯ್ದೆಯ ಪ್ರಕಾರ ಶಿಕ್ಷೆಗೆ ಒಳಪಡಿಸುತ್ತಿದ್ದರು. ಆದರೆ ಕಾರ್ಮಿಕರಲ್ಲಿದ್ದ ಅಜ್ಞಾನ, ಅನಕ್ಷರತೆ, ಕೆಳಜಾತಿಯವರೆಂಬ ಕೀಳರಿಮೆ, ಸಂಘಟನೆಯ ಕೊರತೆಯಿಂದಾಗಿ, ಭೂ ಮಾಲೀಕರನ್ನು ಎದುರಿಸುವ ಸಾಮರ್ಥ್ಯವಿಲ್ಲದೆ ಹಾಗೂ ಕೃಷಿ, ತೋಟಗಳಲ್ಲಿನ ಕೆಲಸವು ಋತು ಸಂಬಂಧಿಯಾಗಿದ್ದು, ಬಹುತೇಕ ಕಾರ್ಮಿಕರು ವಲಸಿಗರಾಗಿದ್ದ ಕಾರಣ ಕೃಷಿ ಕಾರ್ಮಿಕರ ಪ್ರತಿಭಟನೆಗಳು ಸಂಭವಿಸಿದ ಸಂಖ್ಯೆ ಕಡಿಮೆಯಾಗಿತ್ತು. ಉದಾ:– ಅಸ್ಸಾಂ ಟೀ ತೋಟದ ಕಾರ್ಮಿಕರ ಚಳವಳಿ, ನೀಲಿ ಬೆಳೆಗಾರರ ದಂಗೆ, ಕಾಚಾರ್ ಜಿಲ್ಲೆಯ ಟೀ ಕಾರ್ಮಿಕರ ಚಳವಳಿ, ತೆಲಂಗಾಣದ ರೈತರ ಹೋರಾಟ, ಬಂಗಾಳದ ತೆಭಾಗಾ ಹೋರಾಟ, ಕೇರಳದ ರೈತ ಹೋರಾಟಗಳು, ಮಹಾರಾಷ್ಟ್ರದ ವಾರ್ಲಿ ಬುಡಕಟ್ಟು ಹೋರಾಟಗಳು, ಬ್ರಿಟೀಷ್ ನೌಕಾ ಸೈನಿಕರ (ರಿನ್) ದಂಗೆಗೆ ಬಾಂಬೆ ಕಾರ್ಮಿಕರು ಬೆಂಬಲ ನೀಡಿದ್ದೂ, ಬಿಹಾರದ ಬಕ್ಷತ್ ಹೋರಾಟಗಳು, ಬ್ರಿಟೀಷರ ಆಡಳಿತ ಮೇಲ್ವರ್ಗದ ಜಮೀನ್ದಾರರು, ಸಂಸ್ಥಾನ ಅಧಿಕಾರಿಗಳು, ಶ್ರೀಮಂತರ ದಬ್ಬಾಳಿಕೆ, ತಾರತಮ್ಯ, ಜಾತಿ ಶ್ರೇಣೀಕರಣದಿಂದ ತೊಂದರೆಗೆ ಒಳಗಾದ ಜನರು ಸಮಾಜದಲ್ಲಿ ಬದಲಾವಣೆ ತರಲು ಇಂತಹ ಹೋರಾಟಗಳಿಗೆ ಮುಂದಾದರು. ಹೀಗಿರುವಾಗ 1920ರಲ್ಲಿ ಸ್ಥಾಪಿತವಾದಂತಹ ಭಾರತೀಯ ಕಮ್ಯುನಿಸ್ಟ್ ಪಕ್ಷವು ಶೋಷಿತ ಭಾರತೀಯ ಕಾರ್ಮಿಕರ ಪರವಾಗಿ ಧ್ವನಿಯೆತ್ತಲು ಮುಂದಾಯಿತು. ಹೀಗೆ ದುಡಿಯುವ ಜನತೆಯಲ್ಲಿ ಶೋಷಣೆಯ ವಿರುದ್ಧ ಹೋರಾಟ ನಡೆಸುವ ಜಾಗೃತಿಯ ಮನೋಭಾವಗಳು ವೃದ್ಧಿಗೊಂಡವು.

ಭಾರತದಲ್ಲಿ ಕಮ್ಯುನಿಸ್ಟ್ ಚಳವಳಿ ಪ್ರವರ್ತಕರಾದ ಮುಜಾಫರ್ ಅಹ್ಮದ್, ಸಿಂಗಾರವೇಲು ಚೆಟ್ಟಿಯಾರ್, ಎಸ್.ಎ.ಡಾಂಗೆ, ಗುಲಾಮ್ ಹುಸೇನ್ ಮುಂತಾದವರು ಕಾರ್ಮಿಕ ವರ್ಗವನ್ನು ಸಂಘಟಿಸಲು ಮುಂದಾದರು. ಅಲ್ಲದೆ ಕಾರ್ಮಿಕರಿಗೆ ಹೆಚ್ಚಿನ ವೇತನ, ಕಡಿಮೆ ಕೆಲಸದ ಅವಧಿ, ಉತ್ತಮ ಜೀವನ ಪರಿಸ್ಥಿತಿಗಳನ್ನು ನಿರ್ಮಿಸಲು, ಸಾಮಾಜಿಕ ಮತ್ತು ಆರ್ಥಿಕ ಶೋಷಣೆಯನ್ನು ಹೋಗಲಾಡಿಸಲು ಕಮ್ಯುನಿಸ್ಟರು ಪ್ರತಿಭಟನೆಗಳನ್ನು ಸಂಘಟಿಸಿದರು. ಕಾನ್ಪುರ್ ಬೋಲ್ಷೆವಿಕ್ ಪಿತೂರಿ ಪ್ರಕರಣ (1924), ಮೀರತ್‌ನ ಪಿತೂರಿ ಪ್ರಕರಣದಲ್ಲಿ (1929), 1928ರಲ್ಲಿ ಬಾಂಬೆಯಲ್ಲಿ ನಡೆದ ಕಾರ್ಮಿಕರ ಚಳವಳಿಯಲ್ಲಿ ಕಮ್ಯುನಿಸ್ಟರು ಸಕ್ರಿಯವಾಗಿದ್ದು ಹಲವು ಸದಸ್ಯರನ್ನು ಬಂಧಿಸಿದರು. ಎಲ್ಲಾ ವರ್ಗದ ಮಹಿಳೆಯರನ್ನು ಸಂಘಟಿಸಲು ಕಮ್ಯುನಿಸ್ಟರು ಮುಂದಾದರು. 1939ರಲ್ಲಿ ವಿದ್ಯಾರ್ಥಿನಿಯರ ಸಮಿತಿಯನ್ನು ರಚಿಸಿದರು ಇದರಲ್ಲಿ ಕನಕ್‌ಮುಖರ್ಜಿ, ಚಿತ್ತಗಾಂಗ್ ಶಸ್ತ್ರಾಗಾರದ ದಾಳಿಯ ನಾಯಕಿಯಾದ ಕಲ್ಪನಾದತ್ ಮುಂತಾದವರು ಸದಸ್ಯರಾಗಿದ್ದರು. ಇದರ ಮೂಲಕ ಮಹಿಳೆಯರನ್ನು ಸಂಘಟಿಸಲು ಮುಂದಾದರು. ಆಂಧ್ರಪ್ರದೇಶದ ಪಿ.ಸುಂದರಯ್ಯ, ಕೇರಳದ ಎ.ಕೆ.ಗೋಪಾಲನ್, ಕೃಷ್ಣಪಿಳ್ಳೈ, ಇ.ಎಂ.ಎಸ್. ನಂಬೂದಿರಿಪಾಡ್, ತಮಿಳುನಾಡಿನ ಪಿ.ರಾಮಮೂರ್ತಿ, ಶ್ರೀನಿವಾಸರಾವ್, ಮಹಾರಾಷ್ಟ್ರದ ಎಸ್.ವಿ. ಪರುಲೆಕರ್, ಬಿ.ಟಿ.ರಣದಿವೆ, ಆರ್.ಸಿ.ಮೋರೆ ಮುಂತಾದವರು ಸಾಮಾಜಿಕ ನ್ಯಾಯಕ್ಕಾಗಿ, ಜಾತಿ ಮತ್ತು

ಲಿಂಗ ತಾರತಮ್ಯ, ಅಸಮಾನತೆಯ ವಿರುದ್ಧ ಸಾಮಾಜಿಕ ಸುಧಾರಣೆಗಾಗಿ ಹೋರಾಟಗಳನ್ನು ನಡೆಸುತ್ತಾ ಮೇಲ್ಜಾತಿಯ ಯಜಮಾನಿಕೆಯ ಪ್ರಾಬಲ್ಯವನ್ನು ಮೆಟ್ಟಿ ನಿಲ್ಲಲು, ಊಳಿಗಮಾನ್ಯ ದಬ್ಬಾಳಿಕೆಯನ್ನು ಎದುರಿಸಲು ದಲಿತರು ಮತ್ತು ಇತರ ಹಿಂದುಳಿದ ಜಾತಿಗಳಿಗೆ ಕಮ್ಯುನಿಸ್ಟ್ ಚಿಂತನೆಗಳ ಮೂಲಕ ಸಾಮರ್ಥ್ಯ, ಬಲವನ್ನು ನೀಡಿದರು.

**ಕರ್ನಾಟಕದಲ್ಲಿ ಕಾರ್ಮಿಕರ ಪ್ರತಿಭಟನೆಗಳ ಚಾರಿತ್ರಿಕ ಹಿನ್ನೆಲೆ**

ಕರ್ನಾಟಕದ ಭೌಗೋಳಿಕ ವ್ಯಾಪ್ತಿಯಲ್ಲಿ ಅನೇಕ ಕೃಷಿ, ಕೃಷಿಯೇತರ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಲವಾರು ಕಾರ್ಮಿಕರ ಚಳವಳಿಗಳು ನಡೆದಿರುವುದನ್ನು ಕಾಣಬಹುದಾಗಿದೆ. ಅದರಲ್ಲಿ ಕೃಷಿ, ಕೈಗಾರಿಕೆ, ಗಣಿಗಾರಿಕೆ ಇತ್ಯಾದಿಗಳಲ್ಲಿ ತೊಡಗಿದ್ದ ಕಾರ್ಮಿಕರು ತಮ್ಮ ಮೇಲಿನ ದೌರ್ಜನ್ಯ ಖಂಡಿಸಿ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಸುಧಾರಣೆಗಾಗಿ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಕೆಲವೊಂದು ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರಲ್ಲದ ರೈತರು ಆರ್ಥಿಕ ಶೋಷಣೆ, ಸಾಮಾಜಿಕ ಅಸಮಾನತೆಯ ವಿರುದ್ಧ ದಂಗೆಗಳನ್ನು ನಡೆಸುತ್ತಿದ್ದರು. ಉದಾಃ ನಗರದಂಗೆ, ಕೊಡಗಿನ ಬಂಡಾಯ, ದಕ್ಷಿಣ ಕನ್ನಡದಲ್ಲಿ ನಡೆದ ದಂಗೆಗಳು ಇತ್ಯಾದಿ. ಅವುಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶೋಷಿತರಾದ ರೈತರು, ಕಾರ್ಮಿಕರು ಭೂ ತೆರಿಗೆ, ಹುಲ್ಲುಗಾವಲು ತೆರಿಗೆ, ಅರಣ್ಯ ತೆರಿಗೆ, ಮನೆತೆರಿಗೆ ಮುಂತಾದವುಗಳನ್ನು ವಿರೋಧಿಸಿ ಕ್ರಿ.ಶ. 1810–11ರಲ್ಲಿ ಅಸಂಘಟಿತರಾಗಿ ಪ್ರತಿಭಟಿಸಿದರು. ಇದರಿಂದಾಗಿ ಬ್ರಿಟೀಷರು ತೆರಿಗೆಯನ್ನು ಪುನರ್ ಪರಿಶೀಲಿಸಿ ಸ್ವಲ್ಪ ಕಡಿಮೆ ಮಾಡಿದರು. 'ಕೂಟ್ ರೆಬಿಲಿಯನ್'ಅನ್ನು ರಚಿಸಿಕೊಂಡು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಬ್ರಿಟೀಷರಿಗೆ ಮನವಿಯನ್ನು ಸಲ್ಲಿಸುತ್ತಿದ್ದರು. ಅದಕ್ಕಾಗಿ ದೇವಾಲಯ, ಮಠಗಳಲ್ಲಿ ಸಭೆ ಸೇರಿ ಚರ್ಚಿಸುತ್ತಿದ್ದರು. ಉದಾ ಃ ಕದ್ರಿ ಮಂಜುನಾಥ ದೇವಸ್ಥಾನ. ದಕ್ಷಿಣ ಕನ್ನಡದಲ್ಲಿ ಕರ್ಷಕ ಸಂಘ (ರೈತರು) ಮತ್ತು ತೊಯಿಲಾಳ (ಕಾರ್ಮಿಕ) ಸಂಘಟನೆಗಳು ಬ್ರಿಟೀಷರ ವಿರುದ್ಧ ಭೂಮಾಲೀಕರ ಶೋಷಣೆ ವಿರುದ್ಧ ಹೋರಾಟ ನಡೆಸಿದರು. 1930ರಲ್ಲಿ ಬೀಡಿ ಕಾರ್ಮಿಕರು ಸಂಘಟಿತರಾದರು. 1931ರಲ್ಲಿ ಶೋಷಿತ ಕಾರ್ಮಿಕರನ್ನು ಸಂಘಟಿಸಲು ಕಮಲಾದೇವಿ ಚಟ್ಟೋಪಾಧ್ಯಾಯಿನಿಯವರು 'ದಕ್ಷಿಣ ಕನ್ನಡ ಕಾರ್ಮಿಕ ಸಂಘ'ವನ್ನು ಸ್ಥಾಪಿಸಿದರು. ಇವಲ್ಲದೇ ತಾಳೆಬೆಲ್ಲ ತಯಾರಕರ ಸಂಘ, ಗೋಡಂಬಿ ಕಾರ್ಮಿಕರ ಸಂಘ, ನೇಯ್ಗೆ ಕಾರ್ಮಿಕರ ಸಂಘಗಳು ರಚನೆಯಾಗಿದ್ದು ಕೆನರಾ ಭಾಗದಲ್ಲಿ ರೈತರು, ನಡೆಸುತ್ತಿದ್ದ ಚಳವಳಿಗೆ ಬೆಂಬಲ ನೀಡುತ್ತಿದ್ದರು. ಇವುಗಳಿಗೆ ಎಂ.ಹೆಚ್.ಕೃಷ್ಣಪ್ಪ, ಕೊರಗಪ್ಪರೈ, ಕೃಷ್ಣಶೆಟ್ಟಿ, ಬಿ.ವಿ.ಕಕ್ಕಿಲಾಯ, ಸಿಂಪ್ಸನ್ ಸೋನ್ಸ್, ಪಿ.ಎಂ.ಮೂರ್ತಿ, ಕೇಶವ ಕಾಮತ್, ಶಾಂತರಾಮ ಪೈ, ಎನ್.ಎಸ್.ಹೊಳ್ಳರಂತಹ ನಾಯಕರು ಬೆಂಬಲ ನೀಡುತ್ತಿದ್ದರು.

ಬ್ರಿಟೀಷರ ಆಳ್ವಿಕೆಯಲ್ಲಿ ಕರ್ನಾಟಕದ ಮೈಸೂರು ಮತ್ತು ಸುತ್ತಮುತ್ತಲಿನ ಭಾಗಗಳಲ್ಲಿ ಕಾಫಿ ಮತ್ತು ಅಡಿಕೆ ತೋಟಗಳು, ಬೆಂಗಳೂರು, ಮೈಸೂರು, ಭದ್ರಾವತಿ ಮುಂತಾದ ಕಡೆ ಕಾರ್ಖಾನೆಗಳು, ಕೋಲಾರದ ಚಿನ್ನದ ಗಣಿಗಳು ಶ್ರಮ ಬಯಸುವ ಉದ್ದಿಮೆಗಳಾಗಿದ್ದು, ಸಾವಿರಾರು ಜನರು ದಿನನಿತ್ಯ ದುಡಿಯುತ್ತಿದ್ದರು. ಕರ್ನಾಟಕದ ಕಾರ್ಮಿಕವರ್ಗದ ಚಳವಳಿ ಸಂಘಟಿತ ಅಖಿಲ ಭಾರತ ಕಾರ್ಮಿಕ ಚಳವಳಿಯ ಒಂದು ಭಾಗವಾಗಿತ್ತು. ಕ್ರಿ.ಶ. 1884ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ "ಬೆಂಗಳೂರು ಉಣ್ಣೆ, ಹತ್ತಿ ಹಾಗೂ ರೇಷ್ಮೆ ಮಿಲ್" ರಾಜ್ಯದ ಮೊದಲ ಮಿಲ್ ಆಗಿದ್ದು, 1886ರಲ್ಲಿ 'ಬಿನ್ನಿಮಿಲ್' ಎಂದು ಕರೆಯಲ್ಪಟ್ಟಿತು. ನಂತರದಲ್ಲಿ

‘ಮಿನರ್ವ ಮಿಲ್’ ಮೈಸೂರಿನಲ್ಲಿ ಕೃಷ್ಣರಾಜೇಂದ್ರ ಮಿಲ್‌ಗಳು ಇತ್ಯಾದಿ ಹತ್ತಿ ಗಿರಣಿಗಳು ಸ್ಥಾಪಿತವಾದವು. ನಂತರ ಕೋಲಾರದ ಚಿನ್ನದ ಗಣಿ, ಶಿವನ ಸಮುದ್ರದಲ್ಲಿ ವಿದ್ಯುಚ್ಛಕ್ತಿ ತಯಾರಿಕ ಘಟಕ (1902), ಮಂಗಳೂರಿನಲ್ಲಿ ಹೆಂಚಿನ ಕಾರ್ಖಾನೆಗಳು, ಮುದ್ರಣಾಲಯ, ತಂಬಾಕು ಕಾರ್ಖಾನೆ, ಮೈಸೂರಿನಲ್ಲಿ ರೇಷ್ಮೆ ಕಾರ್ಖಾನೆ, ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಬೆಂಗಳೂರು, ದಾವಣಗೆರೆಯಲ್ಲಿ ಗಿರಣಿಗಳು ಸ್ಥಾಪಿಸಿದ್ದರಿಂದ ಕಾರ್ಮಿಕರ ಸಂಖ್ಯೆಯು / ವರ್ಗವು ಬೆಳೆಯಿತು. ಈ ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರು ತಮ್ಮ ಮೇಲಿನ ಶೋಷಣೆಯ ವಿರುದ್ಧ ಹೋರಾಟ ನಡೆಸಲು ಸಮಯ ಹಿಡಿಯಿತು. ಕರ್ನಾಟಕ / ಮೈಸೂರು ಪ್ರಾಂತ್ಯದಲ್ಲಿ ಮೊದಲನೇ ಕಾರ್ಮಿಕರ ಮುಷ್ಕರವನ್ನು ಬಿನ್ನಿಮಿಲ್ಲಿನ ಕಾರ್ಮಿಕರು ಬೋನಸ್‌ಗಾಗಿ 1920ರಲ್ಲಿ ಕಾಂಗ್ರೇಸ್ ನಾಯಕರಾದ ಕೆ.ಟಿ.ಭಾಷ್ಯಂ ನೇತೃತ್ವದಲ್ಲಿ ನಡೆಸಿದರು. ಈ ವೇಳೆಯಲ್ಲಿ ‘ಬಿನ್ನಿಮಿಲ್ ವರ್ಕರ್ಸ್ ಕೌನ್ಸಿಲ್’ ಅನ್ನು ರಚಿಸಿಕೊಂಡು ಹೋರಾಟವನ್ನು ಸಂಘಟಿಸಿದರು. ಇದರಿಂದ ಪ್ರೇರಣೆಗೊಂಡು ಮಿನರ್ವ ಮಿಲ್ ಮತ್ತು ಕೃಷ್ಣ ಮಿಲ್‌ಗಳಲ್ಲಿ ಕಾರ್ಮಿಕರ ಸಂಘಗಳು ರಚಿತವಾದವು.

ರಾಷ್ಟ್ರೀಯ ಕಾಂಗ್ರೇಸ್‌ನ ನಾಯಕರಾದ ಕೆ.ಟಿ. ಭಾಷ್ಯಂ, ಎಸ್.ಡಿ.ಶಂಕರ್, ರಾಮಶರ್ಮ ಮುಂತಾದ ನಾಯಕರು ಬೆಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಸಂಘಟಿಸಲು ಮುಂದಾದರು. ಅದರಂತೆ ಕರ್ನಾಟಕದಲ್ಲಿ ಕಾರ್ಮಿಕರ ಸಂಘಗಳು ವೃದ್ಧಿಯಾಗಿ, ಕಾರ್ಮಿಕರಲ್ಲಿ ಪ್ರತಿಭಟನೆಯ ಮನೋಭಾವನೆಗಳನ್ನು ಜಾಗೃತಿಗೊಳಿಸಿದವು. ಇದರ ಪರಿಣಾಮವಾಗಿ ಅನೇಕ ಕಾರ್ಮಿಕರ ಚಳವಳಿ, ಪ್ರತಿಭಟನೆಗಳು ಸಂಭವಿಸಿದವು. ಕ್ರಿ.ಶ. 1925ರಲ್ಲಿ ಬಿನ್ನಿಮಿಲ್‌ನಲ್ಲಿ ಕಣ್ಣಿಯಾರ್ ಎಂಬ ಕೆಳಜಾತಿಗೆ ಸೇರಿದ ಕಸ್ತೂರಿ ಎಂಬ ಕೂಲಿಯು ಮೇಲ್ಜಾತಿಗೆ ಸೇರಿದ ತಮಿಳು ಕೂಲಿಯಾದ ಚೆನ್ನ ಎಂಬುವವನಿಗೆ ನೀರನ್ನು ಕೊಟ್ಟಾಗ ಅವನು ಕಸ್ತೂರಿಯನ್ನು ಹೊಲೆಯನೆಂದು ಕರೆದು ಅವಮಾನಿಸಿದನು. ಇದರಿಂದ ಅಸಮಧಾನಗೊಂಡ ಹೊಲೆಯರು ಎಂದು ಕರೆಯಲ್ಪಟ್ಟ ಕೂಲಿಗಳನ್ನು ಕಣ್ಣಿಯಾರರು ಎಂದು ಕರೆಯುತ್ತಿದ್ದು, ಅವರು ಅಸ್ಪೃಶ್ಯಾಚರಣೆಯನ್ನು ವಿರೋಧಿಸಿ ತಮಗೆ ನ್ಯಾಯ ಕೊಡಿಸುವಂತೆ ಕಾಂಗ್ರೇಸ್ ಮುಖಂಡರಾದ ನಂಜನಗೂಡಿನ ತಗಡೂರು ರಾಮಚಂದ್ರರಾವ್‌ರವರಿಗೆ ಮನವಿ ಸಲ್ಲಿಸಿದರು. ಮತ್ತು ತಮಗೆ ನ್ಯಾಯ ಸಿಗದಿದ್ದರೆ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುವುದಾಗಿ ಎಚ್ಚರಿಸಿದರು. ಆಗ ನ್ಯಾಯ ಪಂಚಾಯಿತಿ ನಡೆಸಿದ ರಾಮಚಂದ್ರರಾವ್‌ರವರು ಅಸ್ಪೃಶ್ಯತೆಯನ್ನು ಖಂಡಿಸಿದರು ಹಾಗೂ ಎರಡು ಗುಂಪಿನ ಮಧ್ಯೆ ರಾಜಿ ಮಾಡಿಸಿದರು. 1926ರಲ್ಲಿ ಬಿನ್ನಿಮಿಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಲು ನೀಲಗಿರಿ ಸಂಜೀವಯ್ಯನವರು ‘ಬೆಂಗಳೂರು ಟೆಕ್ಸ್ ಟೈಲ್ ಲೇಬರ್ ಯೂನಿಯನ್’ ಎಂಬ ಕಾರ್ಮಿಕ ಸಂಘವನ್ನು ಸ್ಥಾಪಿಸಿದರು. ಅದನ್ನು ಮೈಸೂರು ಸಂಸ್ಥಾನ ಸರ್ಕಾರವು ಮಾನ್ಯಗೊಳಿಸಲಿಲ್ಲ. ಇದನ್ನು ಖಂಡಿಸಿ 1926ರಲ್ಲಿ ಬಿನ್ನಿಮಿಲ್ ಕಾರ್ಮಿಕರು ಮುಷ್ಕರ ನಡೆಸುತ್ತಾ ಅಲ್ಲಿದ್ದ ಪೊಲೀಸರ ಮೇಲೆ ದಾಳಿ ನಡೆಸಿದರು. ಆಗ ಅದಕ್ಕೆ ಪ್ರತಿಯಾಗಿ ಪೊಲೀಸರು ದಾಳಿ ಮಾಡಿದಾಗ ನಾಲ್ವರು ಸತ್ತು ಅನೇಕರು ಗಾಯಗೊಂಡರು. ತದನಂತರ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ಘಟನೆಯನ್ನು ಚರ್ಚಿಸಿ ಗಲಭೆ ನಿಯಂತ್ರಣಕ್ಕಾಗಿ ಗುಂಡು ಹಾರಿಸಲಾಯಿತೆಂದು ತೀರ್ಮಾನಿಸಿ ನೊಂದವರಿಗೆ ಪರಿಹಾರ ನೀಡಲಾಯಿತು. 1931ರಲ್ಲಿ ಬಿನ್ನಿಮಿಲ್ ಕಾರ್ಮಿಕರು ಬೋನಸ್‌ಗಾಗಿ ಬೇಡಿಕೆಯಿಟ್ಟು ಕಾಂಗ್ರೇಸ್ ನಾಯಕರಾದ ಕೆ.ಟಿ. ಭಾಷ್ಯಂ, ರಾಮಶರ್ಮ,

ಕಮ್ಯುನಿಸ್ಟ್ ನಾಯಕರಾದ ಎಂ.ಎಸ್.ರಾಮರಾವ್, ಸಿ.ಬಿ. ಮೊನ್ನಯ್ಯ, ಎನ್.ಡಿ. ಶಂಕರ್ ಮುಂತಾದವರ ನೇತೃತ್ವದಲ್ಲಿ ಮುಷ್ಕರ ಹೂಡಿದರು. ಅದನ್ನು ತಡೆಯಲು ಮಾಲೀಕರು, ಪೊಲೀಸರು ಒಂದಾಗಿ ಹಿಂಸಾತ್ಮಕ ದಾಳಿ ನಡೆಸಿದರು ಮತ್ತು ಅನೇಕ ನಾಯಕರನ್ನು ಬಂಧಿಸಿ ಸೆರೆಮನೆಗೆ ತಳ್ಳಿದರು. 1941ರಲ್ಲಿ ಬಿನ್ನಿಮಿಲ್ಲಿನ ಕಾರ್ಮಿಕರು ತಮ್ಮ ಸಹೋದ್ಯೋಗಿಗಳಿಗೆ ಬೋನಸ್ ನೀಡಲು ಆಡಳಿತ ಮಂಡಳಿ ನಿರಾಕರಿಸಿದ್ದರಿಂದ, ತಮಗೆ ಬರಬೇಕಾಗಿದ್ದ ಬೋನಸ್ಸನ್ನು ಸಹಾ ನಿರಾಕರಿಸಿ ಪ್ರತಿಭಟನೆ ನಡೆಸಿದರು. ಇದಲ್ಲದೇ ವಿವಿಧ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಬಿನ್ನಿಮಿಲ್‌ನಲ್ಲಿ ಅನೇಕ ಮುಷ್ಕರಗಳು ನಡೆಯಲ್ಪಟ್ಟಿರುವುದು ವಿಶೇಷವಾಗಿದೆ. 1936ರಲ್ಲಿ ಬೆಂಗಳೂರಿನ ಇಂಪೀರಿಯಲ್ ತಂಬಾಕು ಕಾರ್ಖಾನೆಯಲ್ಲಿ ತಂತ್ರಜ್ಞಾನ ಅಳವಡಿಕೆಯಿಂದ ಕೆಲಸ ಕಳೆದುಕೊಂಡ ಟಿಂಕರುಗಳು, ಅವರಿಗೆ ಬೆಂಬಲವಾಗಿ ಮಹಿಳಾ ಕಾರ್ಮಿಕರು ಮುಷ್ಕರ ನಡೆಸಿದರು. ತದನಂತರದಲ್ಲಿ ಕಾರ್ಮಿಕರ ಸಂಘ ರಚಿಸಲು ಅನುಮತಿ ಕೋರಿದಾಗ ಆಡಳಿತ ಮಂಡಳಿ ನಿರಾಕರಿಸಿತು. 1946ರಲ್ಲಿ ತಂಬಾಕು ಕಾರ್ಖಾನೆ ಕಾರ್ಮಿಕರು ವೇತನ ಸಹಿತ ರಜೆ, ಬಡ್ತಿ, ಹೆರಿಗೆ ಸೌಲಭ್ಯ, ಕಾರ್ಮಿಕರ ಮೇಲೆ ವಿಧಿಸುವ ಶಿಕ್ಷೆ ಮತ್ತು ವಜಾ ಮಾಡುವುದನ್ನು ನಿಲ್ಲಿಸುವಂತೆ 2 ತಿಂಗಳುಗಳ ಕಾಲ ವೇತನವಿಲ್ಲದೆ ಚಳವಳಿಯನ್ನು ನಡೆಸಿದರು. ಇದಕ್ಕೆ ಮಾಂಘೀರ್, ಸಹರಾನ್‌ಪುರ್ ಮತ್ತು ಕಲ್ಕತ್ತಾಗಳಲ್ಲಿನ ತಂಬಾಕು ಕಾರ್ಮಿಕರು ಬೆಂಬಲ ನೀಡಿದರು. ಆದರೆ ಕಾರ್ಖಾನೆ ಆಡಳಿತ ಮಂಡಳಿಯು ಚಳವಳಿಗೆ ವಿರುದ್ಧವಾಗಿ ಬೇರೆ ಕಾರ್ಮಿಕರನ್ನು ನೇಮಿಸಿಕೊಂಡಿದ್ದರಿಂದ ಈ ಚಳವಳಿ ವಿಫಲವಾಯಿತು. 1939ರ ಜನವರಿ ಫೆಬ್ರವರಿಯಲ್ಲಿ ಬೆಂಗಳೂರಿನ ಟಿ.ಆರ್.ಮಿಲ್‌ನ ಕಾರ್ಮಿಕರು ಹಬ್ಬಗಳಿಗೆ ಮುಂಗಡ ವೇತನ ನೀಡುವಂತೆ, ವಜಾ ಮಾಡಿದ ಕಾರ್ಮಿಕರ ಬಗ್ಗೆ ಪುನರ್ ಪರಿಶೀಲಿಸಿ ಪುನಃ ಕೆಲಸಕ್ಕೆ ನೇಮಿಸಿಕೊಳ್ಳುವಂತೆ ಬೇಡಿಕೆ ಇಟ್ಟು ಚಳವಳಿ ನಡೆಸಿದಾಗ ಅದು ಸಫಲವಾಯಿತು. ಅದರಿಂದ ಪ್ರಭಾವಿತವಾಗಿ ಸರ್ಕಾರಿ ಸ್ವಾಮ್ಯದ ಪೋರ್ಸಿಲೇನ್ ಕಾರ್ಖಾನೆ, ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳಲ್ಲಿ 1940ರಲ್ಲಿ ದಿನಗೂಲಿ ನೌಕರರನ್ನು ವಜಾ ಮಾಡಿದ ಕ್ರಮವನ್ನು ಖಂಡಿಸಿ ಪ್ರತಿಭಟಿಸಿದರು. 1939ರಲ್ಲಿ ಕಾಂಗ್ರೆಸ್‌ನ ಎಸ್. ರಾಮಸ್ವಾಮಿಯವರ ನೇತೃತ್ವದಲ್ಲಿ ಮೈಸೂರಿನ ರೈಲ್ವೆ ವರ್ಕ್‌ಶಾಪ್ ಕಾರ್ಮಿಕರು ಒಕ್ಕೂಟವನ್ನು ರಚಿಸಿಕೊಂಡು ಮೈಸೂರಿನಲ್ಲಿ ನಿಷೇದಾಜ್ಞೆಯನ್ನು ಉಲ್ಲಂಘಿಸಿ ಸಭೆಯನ್ನು ನಡೆಸಿದರು. ಇದನ್ನು ಖಂಡಿಸಿ ಮೈಸೂರಿನ ಸರ್ಕಾರವು ರಾಮಸ್ವಾಮಿಯವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿತು. ಆಗ ಅವರ ಬಂಧನವನ್ನು ಖಂಡಿಸಿ ಸಾವಿರಾರು ಜನ ರೈಲ್ವೆ ಕಾರ್ಮಿಕರು ನ್ಯಾಯಾಲಯಕ್ಕೆ ನುಗ್ಗಿದರು. 1941 ರಲ್ಲಿ ಮೈಸೂರು ಕೃಷ್ಣರಾಜೇಂದ್ರ ಮಿಲ್ ಬೆಂಗಳೂರಿನ ಮಿನರ್ವಾ ಮಿಲ್, ಇತ್ಯಾದಿಗಳಲ್ಲಿ ಕಾರ್ಮಿಕರು ವೇತನ ಹೆಚ್ಚಳ, ಬೋನಸ್‌ಗಾಗಿ ಅನಾರೋಗ್ಯಕ್ಕೆ ರಜೆ ನೀಡುವಂತೆ, ಕೆಲಸ ಮಾಡಿದವರನ್ನು ಖಾಯಂ ನೌಕರರೆಂದು ಪರಿಗಣಿಸುವಂತೆ, ತಮ್ಮ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆ, ಶೋಷಣೆಗಳನ್ನು ಖಂಡಿಸಿ, ಜಾತಿ ತಾರತಮ್ಯ, ಅಸ್ಪೃಶ್ಯತಾಚರಣೆಯನ್ನು ವಿರೋಧಿಸಿ ಕರ್ನಾಟಕದಲ್ಲಿ ಕಾರ್ಮಿಕರು ಚಳವಳಿಗಳನ್ನು ನಡೆಸುತ್ತಿದ್ದುದರ ಬಗ್ಗೆ ಚಾರಿತ್ರಿಕವಾಗಿ ದಾಖಲಿಸಿರುವುದನ್ನು ಗುರುತಿಸಬಹುದು. ಕರ್ನಾಟಕದಲ್ಲಿ ಕಾರ್ಮಿಕರು ತಮ್ಮ ಅಸ್ತಿತ್ವಕ್ಕಾಗಿ, ಬೇಡಿಕೆಗಳ ಈಡೇರಿಕೆಗಾಗಿ ಸಂಘಟನೆಗಳನ್ನು ರಚಿಸಿಕೊಂಡು ಹೋರಾಡಲು ಕಾರ್ಮಿಕರ ಸಂಘಗಳ ರಚನೆಗೆ ಮಾನ್ಯತೆ ನೀಡುವಂತೆ ಸುಧೀರ್ಘವಾದ ಹೋರಾಟವನ್ನು ನಡೆಸಿದರ ಪರಿಣಾಮವಾಗಿ ಮೈಸೂರು ಸಂಸ್ಥಾನ ಸರ್ಕಾರವು 1941ರಲ್ಲಿ

ಮೈಸೂರು ಕಾರ್ಮಿಕ ಮಸೂದೆಯನ್ನು ಅಂಗೀಕರಿಸಿ ಕಾರ್ಮಿಕ ಸಂಘಗಳ ಚಟುವಟಿಕೆಗಳಿಗೆ ಮನ್ನಣೆ ನೀಡಿತು. ಕರ್ನಾಟಕದ ಉತ್ತರ ಭಾಗದಲ್ಲಿ ಹುಬ್ಬಳ್ಳಿ ರೈಲ್ವೆ ಕಾರ್ಮಿಕರು, ಗಿರಣಿ ಕಾರ್ಮಿಕರು, ಗುಲ್ಬರ್ಗಾದ ಗಿರಣಿ ಕೆಲಸಗಾರರು, ಶಹಬಾದಿನ ಸಿಮೆಂಟ್ ಕಾರ್ಮಿಕರು, ಮಂಗಳೂರಿನ ಬೀಡಿ ಕಾರ್ಮಿಕರು ಸಹಾ ಕಾಲಕ್ರಮೇಣ ಸಂಘಟಿತರಾದರು. ಮುಷ್ಕರಗಳು, ಪ್ರತಿಭಟನೆಗಳ ಬಲದಿಂದ ಹೊಸ ವ್ಯವಸ್ಥೆಯನ್ನು ರೂಪಿಸಬಹುದೆಂದು, ರುಜುವಾತು ಮಾಡುವಲ್ಲಿ ಕಾರ್ಮಿಕರು ಯಶಸ್ವಿಯಾಗಿದ್ದನ್ನು ಕಾಣಬಹುದು. ಕೃಷಿ ಕೈಗಾರಿಕೆಗಳಿಗೆ ಸಮಾನವಾಗಿ ಕಾರ್ಮಿಕರಿಗೆ ಉದ್ಯೋಗವನ್ನು ಕಲ್ಪಿಸಿದ್ದು ಗಣಿಗಾರಿಕೆಯಾಗಿದೆ. 1881ರಲ್ಲಿ ಯೂರೋಪಿನ ಪ್ರಸಿದ್ಧ ಗಣಿ ಉದ್ಯಮವಾದ 'ಜಾನ್‌ಟೇಲರ್ ಅಂಡ್ ಸನ್ಸ್' ಗಣಿ ಉದ್ಯಮವು ಮೈಸೂರಿನ ಒಡೆಯರಾದ 10ನೇ ಚಾಮರಾಜ ಒಡೆಯರ್ ಮತ್ತು ದಿವಾನರಾದ ರಂಗಾಚಾರ್ಲುರೊಂದಿಗೆ ಒಪ್ಪಂದ ಮಾಡಿಕೊಂಡು ಶೇ.5ರಷ್ಟು ಚಿನ್ನದ ಬೆಲೆಯನ್ನು ರಾಜಧನವಾಗಿ ನೀಡಲು ಒಪ್ಪಿ ಗಣಿ ಉದ್ಯಮವನ್ನು ಕೆ.ಜಿ.ಎಫ್.ನಲ್ಲಿ ಆರಂಭಿಸಿದರು. ಜಾನ್‌ಟೇಲರ್ ಕಂಪನಿಯ ಮುಖ್ಯ ಇಂಜಿನಿಯರ್ ಕ್ಯಾಪ್ಟನ್ ಬಿ.ಡಿ.ಪ್ಲಂಬರ್‌ರವರ ಮೇಲ್ವಿಚಾರಣೆಯಲ್ಲಿ ಉರಿಗಾಂ, ಬಾಲ್‌ಗಾಟ್, ಮೈಸೂರು ಮೈನ್ಸ್, ಚಾಂಪಿಯನ್ ರೀಫ್, ನಂದಿದುರ್ಗ ಗಣಿಗಳನ್ನು ಕೆ.ಜಿ.ಎಫ್.ನಲ್ಲಿ ಸ್ಥಾಪಿಸಿ ಚಿನ್ನದ ಉತ್ಪಾದನೆಗೆ ಮುನ್ನುಡಿ ಬರೆದರು. ಇಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ಸೇಲಂ, ಚಿತ್ತೂರು, ಉತ್ತರ ಆರ್ಕಾಟ್, ಅನಂತಪುರ, ಕೇರಳ ಮೂಲದ ಮತ್ತು ಸ್ಥಳೀಯ ಕಾರ್ಮಿಕರು ವಿವಿಧ ಬಗೆಯ ಕೆಲಸಗಳಲ್ಲಿ ತೊಡಗಿದ್ದರು. ಉನ್ನತ ದರ್ಜೆಯ ಹುದ್ದೆಗಳಲ್ಲಿ ಯುರೋಪಿಯನ್ನರಿಗೆ ಹೆಚ್ಚು ಅವಕಾಶವಿದ್ದು ಕಠಿಣವಾದ ಶ್ರಮದಾಯಕ ಕೆಲಸಗಳನ್ನು ಭಾರತೀಯರು ಮಾಡುತ್ತಿದ್ದರು. 1930ರ ವೇಳೆಗೆ ಕೆ.ಜಿ.ಎಫ್.ನ ಗಣಿ ಕಾರ್ಮಿಕರು ಎಲ್ಲಾ ಗಣಿಗಳಿಂದ ಸುಮಾರು 18,500 ಇದ್ದರು, ಗಣಿ ಕಾರ್ಮಿಕರು ರಾಬರ್ಟ್‌ಸನ್ ಪೇಟೆ ಮತ್ತು ಆಂಡರ್‌ಸನ್ ಪೇಟೆಯ ಗಣಿ ಕಾಲೋನಿಗಳಲ್ಲಿ ಕಷ್ಟಕರವಾದ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದರು. ಇಂತಹ ಕಾರ್ಮಿಕರಲ್ಲಿ ಬಹುತೇಕರು ಆದಿದ್ರಾವಿಡ ಜನಾಂಗಕ್ಕೆ ಸೇರಿದವರಾಗಿದ್ದು, ಜಾತಿ ತಾರತಮ್ಯಕ್ಕೆ ಒಳಪಟ್ಟಿದ್ದರು. ಕೆ.ಜಿ.ಎಫ್ ಗಣಿ ಕಾರ್ಮಿಕರು ಅಪಾಯಕಾರಿಯಾದ ಸ್ಥಿತಿಯಲ್ಲಿ ಗಣಿಗಳ ಆಳದಲ್ಲಿ ಸುರಕ್ಷತೆಯಿಲ್ಲದೆ ದುಡಿಯುತ್ತಿದ್ದರು. ಇವರಿಗೆ ಸರಿಯಾದ ವೇತನ ನೀಡದೆ ಮೂಲ ಸೌಕರ್ಯಗಳನ್ನು ಒದಗಿಸದೇ ಇದ್ದುದರಿಂದ ಕಾರ್ಮಿಕರು ಬಡತನದ ಜ್ವಲಂತ ಸಮಸ್ಯೆಯಲ್ಲಿ ಸಿಲುಕಿದ್ದರು. ಜೀವನ ನಿರ್ವಹಣೆಗೆ ಸಂಬಳ ಸಾಲದೇ ಮಾರ್ವಾಡಿಗಳ ಬಳಿ ಸಾಲವನ್ನು ಪಡೆಯುತ್ತಾ ಅವರಿಂದಲೂ ಶೋಷಣೆಗೆ ಗುರಿಯಾಗಿದ್ದರು. ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಮಣ್ಣು ಕುಸಿತ, ಶಿಲೆಗಳ ಸ್ಫೋಟಗಳಿಂದ ಸಾವಿಗೀಡಾಗುತ್ತಿದ್ದರು. ಅಲ್ಲದೇ ಗಣಿಯ ಧೂಳಿನ ಕಾರಣಕ್ಕಾಗಿ ಸಿಲಿಕೋಸಿಸ್ ರೋಗಕ್ಕೆ ತುತ್ತಾಗುತ್ತಿದ್ದರು. ಇದರ ಜೊತೆಗೆ ಗಣಿ ಮಾಲೀಕರು ಅಧಿಕಾರಿಗಳು ನಡೆಸುತ್ತಿದ್ದ ದೌರ್ಜನ್ಯವನ್ನು ಸಹಿಸಿಕೊಳ್ಳುತ್ತ, ಹೋರಾಟ ಮಾಡಲು ಸಾಧ್ಯವಾಗದೆ ಶೋಷಣೆಯನ್ನು ಅನುಭವಿಸುತ್ತಿದ್ದರು. ಇಂತಹ ಸಮಸ್ಯೆಗಳ ನಡುವೆ ಕಾರ್ಮಿಕರಲ್ಲಿ ಜಾತಿ ತಾರತಮ್ಯಗಳು ಮನೆ ಮಾಡಿದ್ದು, ಕೆಳವರ್ಗದ ನಾಯಕರು ಅಸಮಧಾನ ಹೊಂದಿದ್ದು ಅಸ್ಪೃಶ್ಯತೆಯನ್ನು ವಿರೋಧಿಸುತ್ತಿದ್ದರು.

ಕೆ.ಜಿ.ಎಫ್.ಗಣಿಗಳಲ್ಲಿ 1908 ರಿಂದ 1946 ರ ನಡುವೆ ಸಾಕಷ್ಟು ಕಾರ್ಮಿಕರು ಮರಣ ಹೊಂದಿದ್ದು ಅದನ್ನು ಯುರೋಪಿಯನ್ ಮಾಲೀಕರು ಪರಿಗಣಿಸದೇ ಪರಿಹಾರಗಳನ್ನು ನೀಡದೇ ಜೀತದಾಳುಗಳಂತೆ ಕಾರ್ಮಿಕರಿಂದ ದುಡಿಸಿಕೊಳ್ಳುತ್ತಿದ್ದರು. ಇಂತಹ ಕಾರ್ಮಿಕರು ವೇತನ ಹೆಚ್ಚಳಕ್ಕಾಗಿ, ಬೋನಸ್‌ಗಾಗಿ, ಉತ್ತಮ

ಕಾರ್ಯಸ್ಥಳ ಪರಿಸ್ಥಿತಿಗಾಗಿ, ಸುರಕ್ಷತೆಯ ಕ್ರಮಗಳಿಗಾಗಿ, ಅಸಮಾಧಾನ ಹೊಂದಿದ್ದು, ಸಂಘಟಿತರಾಗಲು ಪ್ರಯತ್ನಿಸದರೇ, ಕಾರ್ಮಿಕ ನಾಯಕರ ಭಾಷಣ, ಚಲನ ವಲನಗಳನ್ನು ಕಂಡರೆ ಅವರನ್ನು ಕೆಲಸದಿಂದ ವಜಾ ಮಾಡುತ್ತಿದ್ದರು. ಇಂತಹ ಶೋಚನೀಯ ಪರಿಸ್ಥಿತಿಯಲ್ಲಿದ್ದ ಗಣಿ ಕಾರ್ಮಿಕರು ಮೊಟ್ಟ ಮೊದಲಿಗೆ 1930ರಲ್ಲಿ ಸಂಘಟಿತರಾಗಿ ಜಾನ್‌ಟೇಲರ್ ಕಂಪನಿಯು 1929ರಲ್ಲಿ ಮೈಸೂರು ಸರ್ಕಾರದ ಕಾರ್ಮಿಕರ ಪರಿಹಾರ ಶಾಸನದನ್ವಯ ಕೇಂದ್ರ ಕಾರ್ಮಿಕರ ನೋಂದಣಿ ಪುಸ್ತಕದಲ್ಲಿ ಕಾರ್ಮಿಕರ ಬೆರಳು ಮುದ್ರೆಯನ್ನು ದಾಖಲು ಮಾಡಲು ಮುಂದಾಗಿದ್ದನು ವಿರೋಧಿಸಿ 18 ದಿನ ಮುಷ್ಕರ ನಡೆಸಿದರು. ಆಗ ದಿವಾನ್ ಮಿರ್ಜಾ ಇಸ್ಮಾಯಿಲ್ ರವರು ಆ ಪ್ರಕ್ರಿಯೆಯನ್ನು ನಿಲ್ಲಿಸಿ, ಕಾರ್ಮಿಕರಿಗೆ ಸಂಬಳ ಕೊಡಿಸಿದರು. ಇದು ಗಣಿ ಕಾರ್ಮಿಕರಿಗೆ ಸಿಕ್ಕ ಗೆಲುವಾಗಿದ್ದು, ಇತರೇ ಕಾರ್ಮಿಕರ ಚಳವಳಿಗಳಿಗೆ ಸ್ಫೂರ್ತಿಯಾಯಿತು. 1940ರಲ್ಲಿ ಕೆ.ಜಿ.ಎಫ್.ಗಣಿ ಕಾರ್ಮಿಕರು ತಮ್ಮ ಸಂಬಳದಲ್ಲಿ ಹಿಡಿಯುತ್ತಿದ್ದ ಒಂದು ರೂಪಾಯಿಯನ್ನು ನಿವೃತ್ತಿ ಹೊಂದಿದವರಿಗೆ ಗಾಯಗೊಂಡವರಿಗೆ ನೀಡುವಂತೆಯೂ ಕೋರಿ, ಅಲ್ಲದೇ ವೇತನ ಹೆಚ್ಚಳ ಗ್ರಾಚ್ಯುಟಿ, ಯುದ್ಧ ಪರಿಹಾರ, ಭವಿಷ್ಯ ನಿಧಿ, ಸಂಬಳ ಸಹಿತ 15 ದಿನ ರಜೆ, ಕಾರ್ಮಿಕರ ಸಂಘ ಸ್ಥಾಪನೆ, ಗುತ್ತಿಗೆ ಕಾರ್ಮಿಕರ ಖಾಯಂಗಾಗಿ ಬೇಡಿಕೆಗಳನ್ನು ಮುಂದಿಟ್ಟು ಕೆಲಸಕ್ಕೆ ಗೈರಾಗಿ ಮುಷ್ಕರ ನಡೆಸಿದರು. ಇವರಿಗೆ ವ್ಯಾಪಾರಿಗಳು, ಕಾರ್ಮಿಕ ಸಂಘಟನೆಗಳ ನಾಯಕರಾದ ಐಎನ್‌ಟಿಯುಸಿಯ ಎಸ್.ಆರ್.ಷಣ್ಮುಗಂ, ಕೆ.ಸಿ.ರೆಡ್ಡಿ, ಎ.ಐ.ಟಿ.ಯು.ಸಿ.ಯ ವಿ.ಎಂ.ಗೋವಿಂದನ್, ವಾಸನ್, ಕಮ್ಯುನಿಸ್ಟ್ ನಾಯಕರಾದ ಎಸ್.ಬಿ. ಅರಕ್ಕಲ್, ಕಣ್ಣನ್ ನಾಯರ್ ರವರು ಬೆಂಬಲಿಸಿದರು. ಇದರ ಪರಿಣಾಮವಾಗಿ ಗಣಿ ಕಂಪನಿಗಳು ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿತು, ನಂತರ ಕಾರ್ಮಿಕರು ಕೆಲಸಕ್ಕೆ ತೆರಳಿದರು. ಮುಂದೆ 1942ರ ಮೈಸೂರು ಕಾರ್ಮಿಕ ಕಾಯ್ದೆ ಅಸ್ತಿತ್ವಕ್ಕೆ ಬಂದ ನಂತರ ಕಾರ್ಮಿಕರ ಸಂಘಟನೆಗಳ ಸ್ಥಾಪನೆಗೆ ಅನುಮತಿ ದೊರಕಿದ ನಂತರ ಗಣಿ ಕಾರ್ಮಿಕರು ಮೇಲ್ಕಂಡ ಕಾರ್ಮಿಕನಾಯಕರ ಪ್ರಭಾವ, ಮಾರ್ಗದರ್ಶನದಂತೆ ವಿವಿಧ ಕಾರ್ಮಿಕ ಸಂಘಟನೆಗಳಲ್ಲಿ ಸಂಘಟಿತರಾಗಿ ತಮ್ಮ ಸಮಸ್ಯೆಗಳನ್ನು ತಿಳಿಸುತ್ತಾ ಪರಿಹಾರ ಪಡೆಯಲು ಪ್ರಯತ್ನಿಸುತ್ತಿದ್ದರು. ಹೀಗೆ ಕೆ.ಜಿ.ಎಫ್.ನ ಶೋಷಿತ ಕಾರ್ಮಿಕರು ತಮ್ಮ ಸಾಮಾಜಿಕ ಆರ್ಥಿಕ ಸ್ಥಿತಿಗತಿ ಸುಧಾರಣೆಗಾಗಿ ಪ್ರತಿಭಟನಾ ಚಳವಳಿಗಳಲ್ಲಿ ಪರಿಹಾರವನ್ನು ಕಂಡುಕೊಳ್ಳಲು ಮುಂದಾದರು.

**ಉಪಸಂಹಾರ**

ಹೀಗೆ ಶೋಷಿತ ಸಮುದಾಯಗಳು ತಮ್ಮ ಸ್ಥಿತಿಗತಿಗಳ ಸುಧಾರಣೆಗಾಗಿ ಮುಷ್ಕರಗಳು, ಪ್ರತಿಭಟನೆಗಳನ್ನು ಕೈಗೊಂಡು ಅದರ ಬಲದಿಂದ ಹೊಸ ವ್ಯವಸ್ಥೆಯನ್ನು ರೂಪಿಸಬಹುದೆಂದು ರುಜುವಾತು ಮಾಡುವಲ್ಲಿ ಕಾರ್ಮಿಕರು ಯಶಸ್ವಿಯಾಗಿದ್ದನ್ನು ಗತಕಾಲದಲ್ಲಿ ನಡೆದಿರುವ ಕಾರ್ಮಿಕರ ಚಳವಳಿಗಳ ಚಾರಿತ್ರಿಕ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಇರ್ಫಾನ್ ಹಬೀಬ್. (ಮೂ.)., ಪ್ರದೀಪ್ ಬೆಳಗಲ್ ಮತ್ತು ಜೈಕುಮಾರ್. (ಅನು.). (2014). ಸಿಂಧೂ ನಾಗರೀಕತೆ, ಚಿಂತನ ಪುಸ್ತಕ, ಬೆಂಗಳೂರು.
- ಇರ್ಫಾನ್ ಹಬೀಬ್ ಮತ್ತು ವಿವೇಕಾನಂದ ಝಾ. (ಮೂ.)., ನಗರಗೆರೆ ರಮೇಶ. (ಅನು.) (2014). ಮೌರ್ಯರ ಕಾಲದ ಭಾರತ. ಚಿಂತನ ಪುಸ್ತಕ, ಬೆಂಗಳೂರು.

- ಇರ್ಫಾನ್ ಹಬೀಬ್. (ಮೂ.)., ಲೋಕೇಶ. ಕೆ. ಎಂ. (ಅನು.). (2020). ಭಾರತದ ಆರ್ಥಿಕತೆ 1757–1857. ಚಿಂತನ ಪುಸ್ತಕ, ಬೆಂಗಳೂರು.
- ಇರ್ಫಾನ್ ಹಬೀಬ್. (ಮೂ.)., ಲೋಕೇಶ. ಕೆ. ಎಂ. (ಅನು.). (2020). ಭಾರತದ ಆರ್ಥಿಕತೆ 1858–1914. ಚಿಂತನ ಪುಸ್ತಕ, ಬೆಂಗಳೂರು.
- ಕುಮಾರ್ ಬಿ.ಪಿ. (2005). ದಾವಣಗೆರೆ ಹತ್ತಿ ಗಿರಣಿ ಕಾರ್ಮಿಕರ ಚಳವಳಿ. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕೊಸಾಂಬಿ.ಡಿ.ಡಿ. (ಮೂ.), ವೇಣುಗೋಪಾಲ್. ಟಿ.ಎಸ್. (ಮೂ.). ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ. ಚಿಂತನ ಪುಸ್ತಕ, ಬೆಂಗಳೂರು.
- ಚಿನ್ನಸ್ವಾಮಿ ಸೋಸಲೆ. (2005). ಸಾಮ್ರಾಜ್ಯ ಮತ್ತು ಸಂಸ್ಥಾನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮಲ್ಲಿಕಾರ್ಜುನ ಕೂಡ್ಲಿಗೆರೆ. (2005). ಕಾಗೋಡು ಸತ್ಯಾಗ್ರಹ. ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ
  ಸಮಿತಿ, ವಿಧಾನ ಸೌಧ, ಬೆಂಗಳೂರು.
- ಮೇಟಿ ಮಲ್ಲಿಕಾರ್ಜುನ (ಸಂ.). (2012). ರೈತ–ಕಾರ್ಮಿಕ ಓದು. ಸಂ.4, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಮೋಹನ್‌ಕೃಷ್ಣ ರೈ ಕೆ. (2004). ಪ್ರಭುತ್ವ ಮತ್ತು ಜನತೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವೆಂಕಟಸ್ವಾಮಿ.ಎಂ. (2019). ಸುವರ್ಣಕಥನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವೇದರಾಜ್. ಎನ್ .ಕೆ. (ಸಂ). (2021). ಭಾರತದ ಕಮ್ಯುನಿಸ್ಟ್ ಆಂದೋಲನ, ಕ್ರಿಯಾ ಪ್ರಕಾಶನ, ಬೆಂಗಳೂರು.
- ಶರ್ಮ ಆರ್.ಎಸ್. (2002). ಪ್ರಾಚೀನ ಭಾರತ. ನವಕರ್ನಾಟಕ ಪ್ರಕಾಶನ, ಬೆಂಗಳೂರು.
- ಶಂಕರನಾರಾಯಣರಾವ್ ಎನ್.ಪಿ. (2006). ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು. ನವಕರ್ನಾಟಕ ಪ್ರಕಾಶನ, ಬೆಂಗಳೂರು.